

# ಜಗಳ ರಹಿತ ಜೀವನ ಜೀವಿಸುವುದು

ಆಶಿಷ್ ರಾಯ್‌ಚೂರ್

ಉಚಿತವಾದ ಹಂಚಿಕೆಗಾಗಿ ಮಾತ್ರ

ಮುದ್ರಣ ಮತ್ತು ಹಂಚಿಕೆ : ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು

ಪ್ರಥಮ ಪ್ರತಿ : ಡಿಜಿಟಲ್ ಬಿಡುಗಡೆ ಸೆಪ್ಟೆಂಬರ್ 2020

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.

ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಟ್ರೈಸ್ಟಯ್ಯ್ ಡಿಸೈನ್ಸ್

Contact Information:
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: bookrequest@apcwo.org
Website: apcwo.org

Unless otherwise indicated, all Scripture quotations are taken from the Holy Bible, New King James Version. Copyright © 1982 by Thomas Nelson, Inc., Used by permission. All rights reserved.

Scriptures marked as "(MSG)" are taken from THE MESSAGE: The Bible in Contemporary Language copyright 2002 by Eugene H. Peterson.

Scriptures marked as "(GNB)" are taken from the GNB – Second Edition © 1992 by American Bible Society. Used by permission.

ಉಚಿತ ವಿತರಣೆಗಾಗಿ

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

ಮೇಲಿಂಗ್ ಪಟ್ಟಿ ಮತ್ತು ಉಚಿತ ಪುಸ್ತಕಮಾಲೆ ಪುಸ್ತಕಗಳಿಗಾಗಿ

ಹೊಸ ಪುಸ್ತಕಗಳು ಮುದ್ರಣವಾದಾಗ ಅವುಗಳನ್ನು ಪಡೆದುಕೊಳ್ಳಲು ದಯವಿಟ್ಟು ನಿಮ್ಮ ಸರಿಯಾದ ಅಂಚೆ ವಿಳಾಸ ಮತ್ತು ಯಾವ ಭಾಷೆಗಳಲ್ಲಿ ಪುಸ್ತಕಗಳು ಬೇಕೆಂಬುದನ್ನು ನಮ್ಮೊಂದಿಗೆ ಹಂಚಿಕೊಳ್ಳಿರಿ. ನಾವು ನಿಮ್ಮ ಸಭೆಯಲ್ಲಿ, ಸತ್ಯವೇದ ಅಧ್ಯಯನ ಗುಂಪು, ಸತ್ಯವೇದ ಶಾಲೆ, ಸೆಮಿನಾರ್ ಮುಂತಾದವುಗಳಿಗಾಗಿ ಹೆಚ್ಚಿನ ಪುಸ್ತಕಗಳನ್ನು ಕಳುಹಿಸಲು ನಾವು ಸಂತೋಷವುಳ್ಳವರಾಗಿದ್ದೇವೆ. ನಿಮಗೆ ಎಷ್ಟು ಪುಸ್ತಕಗಳು ಬೇಕೆಂಬುದನ್ನು ನಮಗೆ ತಿಳಿಸಿ. ನಾವು ಅವುಗಳನ್ನು ನಿಮಗೆ ಕಳುಹಿಸುತ್ತೇವೆ.

(Kannada Book - Living Life without Strife)

# ಜಗಳ ರಹಿತ ಜೀವನ ಜೀವಿಸುವುದು

ಆಶಿಷ್ ರಾಯ್‌ಚೂರ್

# ಪರಿವಿಡಿ


1. ಜಗಳ ಅಂದರೇನು? 1

2. ಜಗಳಕ್ಕೆ ಕಾರಣವೇನು? 3

3. ಜಗಳದ ನಕಾರಾತ್ಮಕ ಪರಿಣಾಮಗಳು 14

4. ನಿಮ್ಮ ಜೀವಿತದಿಂದ ಜಗಳವನ್ನು ಹೊರಗಡೆ ಇಡುವುದು 16

# 1

# ಜಗಳ ಅಂದರೇನು?

ಕುಟುಂಬದಲ್ಲಿ ಕೆಲಸದ ಸ್ಥಳದಲ್ಲಿ, ಸೇವೆಯಲ್ಲಿ, ಸಭೆಯಲ್ಲಿ ಎಲ್ಲೆಡೆಯಲ್ಲೂ ಜಗಳಗಳು ಇವೆ ಮತ್ತು ಇವು ಮಾನವನ ಸಂಬಂಧವನ್ನು ದೂರ ಮಾಡಿ ಹಾಳು ಮಾಡುತ್ತದೆ. ಜಗಳ ಎಂಬುದಾಗಿ ಕರೆಯಲ್ಪಡುವ ಮುಟ್ಟಲಾಗದಂತಹ ಈ ಕ್ಯಾನ್ಸರ್‌ನ ವಿಷಯದಿಂದ ಜೀವನದ ಯಾವುದೇ ಮುಖವು ಬಹುಶಃ ಉಳಿದಿಲ್ಲ ಆದ್ದರಿಂದ ಕಲಹ ಅಥವಾ ಜಗಳ ಅಂದರೇನು? ಇದು ಜನರ ನಡುವಿನ ವಿಭಜನೆ, ಕಲಹ, ದ್ವೇಷ, ವೈಷಮ್ಯ ಆಗಿರುತ್ತದೆ.

ಮನೆಯಲ್ಲಿ, ಗಂಡ ಮತ್ತು ಹೆಂಡತಿ ನಡುವೆ, ತಂದೆತಾಯಿ ಮತ್ತು ಮಕ್ಕಳ ನಡುವೆ ಮತ್ತು ಒಡಹುಟ್ಟಿದವರ ನಡುವೆ, ಜಗಳಗಳನ್ನು ನೋಡುತ್ತೇವೆ - ಮಕ್ಕಳಾಗಿದ್ದಾಗ ನಾವು ಆಟದ ಸಾಮಾನುಗಳ ಮೇಲೆ ಜಗಳವಾಡಿದ್ದೇವು ಮತ್ತು ವಯಸ್ಕರಾದಾಗ ಜಮೀನು ಮತ್ತು ಹಣದ ಕುರಿತು ಜಗಳವಾಡುತ್ತೇವೆ. ನಮ್ಮ ಕೆಲಸದ ಸ್ಥಳದಲ್ಲಿ, ತಂಡದ ಸದಸ್ಯರುಗಳ ನಡುವೆ, ಉದ್ಯೋಗದಾತರು ಮತ್ತು ಉದ್ಯೋಗಸ್ಥರ ನಡುವೆ ಜಗಳಗಳಿರುತ್ತವೆ. ದುರಾದೃಷ್ಟಕರವಾಗಿ ನಮ್ಮ ಸಭೆಗಳಲ್ಲಿಯೂ ಅದೇ ಸಭೆಯ ಸಭಿಕರ ಸದಸ್ಯರುಗಳ ನಡುವೆಯು ಜಗಳಗಳನ್ನು ನೋಡುತ್ತೇವೆ. ಜನರು ಭಾನುವಾರದಲ್ಲಿ 'ಹಲ್ಲೆಲೂಯ' ಎಂಬುದಾಗಿ ಹಾಡಬಹುದು ಆದರೆ ಅದೇ ಸಭೆಯ ಸಭಿಕನಾದ ಇನ್ನೊಬ್ಬನ ಜೊತೆಗೆ ಒಡನಾಟ ಹೊಂದಲೂ ಶಕ್ತರಾಗಿರುವುದಿಲ್ಲ. ದೇವರ ಸೇವಕರುಗಳ ನಡುವೆಯು ಜಗಳಗಳು ಕೆಲವು ಸಮಯದಲ್ಲಿ ಅಸ್ತಿತ್ವದಲ್ಲಿರುವುದನ್ನು ಹೇಳುವುದು ನಿಜವಾಗಿ ದುಃಖಕರವಾಗಿದೆ.

ಈ ಪುಸ್ತಕದ ಉದ್ದೇಶಗಳೇನೆಂದರೆ:

- ಜಗಳಕ್ಕೆ ಏನು ಕಾರಣವಾಗುತ್ತೆಂಬುದನ್ನು ಅರ್ಥ ಮಾಡಿಕೊಳ್ಳುವುದು
- ನಮ್ಮ ಜೀವನದಲ್ಲಿ ಜಗಳವು ಹೊಂದಿರುವ ನಕಾರಾತ್ಮಕ ಪರಿಣಾಮಗಳನ್ನು ಅಧ್ಯಯನ ಮಾಡುವುದು
- ನಮ್ಮ ಜೀವಿತದಿಂದ ಜಗಳವನ್ನು ದೂರವಿರಿಸುವುದು ಹೇಗೆ ಎಂಬುದನ್ನು ಕಲಿಯುವುದು

ನಮ್ಮ ಜೀವಿತದಲ್ಲಿ ಮತ್ತು ಮನೆಗಳಲ್ಲಿ ಜಗಳಗಳಿಲ್ಲ ಎಂಬುದಾಗಿ ಹೇಳುವಂತಹ ಸ್ಥಾನಕ್ಕೆ ಬರುವವರಾಗಿರೋಣ.

**ಜಗಳ ಎಂದು ಕರೆಯಲ್ಪಡುವ ಈ ಕಾನ್ಸರ್ ಎಂಬ ವಿಷಯದಿಂದ ಜೀವನದ ಯಾವುದೇ ರೂಪವು ಬಹುಶಃ ಉಳಿದಿಲ್ಲ**

# 2

# ಜಗಳಕ್ಕೆ ಕಾರಣವೇನು?

## ದ್ವೇಷ

ಜ್ಞಾನೋಕ್ತಿಗಳು 10:12
**ದ್ವೇಷವು ಜಗಳಗನ್ನೆಬ್ಬಿಸುತ್ತದೆ. ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ.**

ದ್ವೇಷವು ಜಗಳಕ್ಕೆ ಕಾರಣವಾಗುತ್ತದೆ. ಉದಾಹರಣೆಗೆ, ನಿಮ್ಮ ಕೆಲಸದ ಸ್ಥಳದಲ್ಲಿ, ನಿಮ್ಮ ಹೊಸ ತಂಡಕ್ಕೆ ಮೊದಲ ದಿವಸದ ನಿಮ್ಮ ಕೆಲಸದಲ್ಲಿ ಪರಿಚಯಿಸಿದಾಗ ಬಹುಶಃ ನೀವು ತುಂಬಾ ಸಂತೋಷವುಳ್ಳವರಾಗಿದ್ದೀರಿ. ಆದರೆ ತದನಂತರದಲ್ಲಿ ತಂಡದ ಒಬ್ಬ ವ್ಯಕ್ತಿಯೊಡನೆ 'ಒಡನಾಟ' ಮಾಡುವುದು ಕಠಿಣ – ಆ ವ್ಯಕ್ತಿಯೊಡನೆ ಕೆಲಸ ಮಾಡುವುದು ಕಷ್ಟಕರ ಎಂಬುದಾಗಿ ತಿಳಿದುಕೊಳ್ಳುತ್ತೀರಿ. ಪ್ರಾರಂಭದಲ್ಲಿ ಆ ವ್ಯಕ್ತಿಗೆ ಸಂಘಜೀವಿಗಳಂತೆ ಪ್ರಯತ್ನಿಸುತ್ತೀರಿ ಆದರೆ ನಿಧಾನವಾಗಿ ಆ ವ್ಯಕ್ತಿಯನ್ನು ಇಷ್ಟಪಡದಿರಲೂ ಪ್ರಾರಂಭಿಸುತ್ತೀರಿ. ತದನಂತರ ಅವನನ್ನು ನಿಯಂತ್ರಣ ಮಾಡುತ್ತೀರಿ ಮತ್ತು ಅವನನ್ನು ದ್ವೇಷಿಸಲೂ ಪ್ರಾರಂಭಿಸುತ್ತೀರಿ. ಒಂದು ದಿನದಲ್ಲಿ ಆ ದ್ವೇಷವು ಹೊರಹಾಕಲ್ಪಡುತ್ತದೆ ಆ ಕ್ಷಣದವರೆಗೂ ಅವನನ್ನು ನೀನು ಇಷ್ಟಪಡುತ್ತಿಲ್ಲ ಎಂಬುದರ ಕುರಿತು ಆ ವ್ಯಕ್ತಿಗೆ ಅರಿವು ಇರುವುದಿಲ್ಲ. ಹೀಗೆ ಆ ವ್ಯಕ್ತಿಯ ಕಡೆಗಿನ ನಿಮ್ಮ ದ್ವೇಷವು ನಿಮ್ಮ ಮತ್ತು ಅವನ ನಡುವೆ ಜಗಳಗಳನ್ನು ಹುಟ್ಟು ಹಾಕುತ್ತದೆ.

## ಕೋಪ/ಉರಿಯುವ ಆವೇಶ

ಜ್ಞಾನೋಕ್ತಿಗಳು 15:18
**ಕೋಪಿಷ್ಟನು ವಾಜ್ಯವನ್ನೆಬ್ಬಿಸುವನು ದೀರ್ಘ ಶಾಂತನು ಜಗಳವನ್ನು ಶಮನ ಪಡಿಸುವನು**

ನಾವೆಲ್ಲರು ಕೋಪಗೊಳ್ಳಲೂ ಸಾಮರ್ಥ್ಯ ಹೊಂದಿದ್ದೇವೆ. ಅನುಭವಗಳು–ಕೋಪವನ್ನು ಒಳಗೊಂಡಂತಹವುಗಳು ನಮ್ಮಲ್ಲಿ ಕಟ್ಟಿರುವಂತಹವುಗಳನ್ನು ಸರಿಯಾಗಿ ಸಂಪರ್ಕಿಸಿಕೊಳ್ಳಬೇಕಾಗಿದೆ. ಪಾಪ, ಅನ್ಯಾಯ ಮತ್ತು ಅಸಹನೆ – ಸರಿಯಾದ ವಿಷಯಗಳ ಬಗ್ಗೆ ನಾವು ಕೋಪಗೊಂಡಿರಬಹುದು.

ಆದರೆ ನಮ್ಮಲ್ಲಿ ಅನೇಕರಿಗೆ ಉದ್ರೇಕಗೊಂಡ ವಿಷಯಗಳು ನಮ್ಮೊಳಗಿವೆ ಮತ್ತು ಯಾರಾದರೂ ಒಂದು ಚಿಕ್ಕ ವಿಷಯ ಹೇಳಿದರೂ ಅಥವಾ ನಮಗೆ ಮಾಡಿದರೂ ಭುಗಿಲೆಬ್ಬಿಸಲ್ಪಡುತ್ತೇವೆ. ಹತೋಟಿಯಲ್ಲಿಟ್ಟುಕ್ಕೊಳ್ಳಲಾಗದಂತಹ ನಮ್ಮ ಕೋಪಗಳು ನಾವು ಗ್ರಹಿಸಲಾಗದಂತ ಅಧಿಕವಾದ ಜಗಳಗಳಿಗೆ ಕಾರಣವಾಗುತ್ತವೆ. ಕೋಪವು ಆಗಾಗ್ಗೆ ವ್ಯಾಜ್ಯಗಳನ್ನೆಬ್ಬಿಸುತ್ತದೆ ಮತ್ತು ಸಂಬಂಧಗಳು ಮುರಿದುಹಾಕಲ್ಪಡಲೂ ಕಾರಣಗಳಾಗುತ್ತದೆ.

ಜ್ಞಾನೋಕ್ತಿಗಳು 29:22
**ಕೋಪಿಷ್ಟನು ಜಗಳವನ್ನೆಬ್ಬಿಸುವನು ಕ್ರೋಧಶೀಲನು ದೋಷಭರಿತನು**

ಜ್ಞಾನೋಕ್ತಿಗಳು 30:33
**ಹಾಲು ಕಡೆಯುವುದರಿಂದ ಬೆಣ್ಣೆ ಮೂಗು ಹಿಂಡುವುದರಿಂದ ಶಕ್ತ ಕೋಪ ಕಲಕುವುದರಿಂದ ಜಗಳ**

ಜ್ಞಾನೋಕ್ತಿಗಳು 30:33 ರ ವಾಸ್ತವಾದ ಇಬ್ರಿಯಭಾಷೆಲ್ಲಿ ಹೀಗೆ ಓದುತ್ತೇವೆ ''ಹಾಲಿನ ಒತ್ತಡವು ಮೊಸರನ್ನು ಉತ್ಪಾದಿಸುತ್ತದೆ, ಮೂಗಿನ ಒತ್ತಡವು ರಕ್ತವನ್ನು ಉತ್ಪಾದಿಸುತ್ತದೆ, ಕೋಪದ ಒತ್ತಡವು ಅಂದರೆ ಅದರ ಮೇಲೆ ಕಾವುಕೊಡುವುದು ಮತ್ತು ಅದು ಇದ್ದಂತೆ, ಸಂಗ್ರಹಿಸುವುದು ಜಗಳವನ್ನು ಉತ್ಪಾದಿಸುತ್ತದೆ.''

## ಹರಟೆ ಮಾತು, ಹಿಂದೆ ದೂರುವುದು ಮತ್ತು ಕಟ್ಟು ಕಥೆ ಹೇಳುವುದು

ಜ್ಞಾನೋಕ್ತಿಗಳು 26:20
**ಕಟ್ಟಿಗೆಯಿಲ್ಲದಿದ್ದರೆ ಬೆಂಕಿ ಆರುವುದು ಚಾಡಿಕೋರನು ಇಲ್ಲದಿದ್ದರೆ ಜಗಳ ಶಮನವಾಗುವುದು**

ಒಬ್ಬ ಚಾಡಿಕೋರನು, ಒಬ್ಬ ಹರಟೆಗಾರನು, ಒಬ್ಬ ಕಟ್ಟುಕಥೆ ಹೇಳುವವನು ಅಥವಾ ಅಪನಿಂದೆಗಾರನು ಜಗಳಗಳನ್ನು ಎಬ್ಬಿಸುತ್ತಾನೆ. ಉದಾಹರಣೆಗೆ ಇಬ್ಬರು ಉತ್ತಮ ಸ್ನೇಹಿತರುಗಳ ಪ್ರಕರಣವನ್ನು ಪರಿಗಣಿಸಿರಿ ಒಬ್ಬ ಸ್ನೇಹಿತನು ರಜೆಗೆ ಹೋಗಿದ್ದಾನೆ ಇನ್ನೊಬ್ಬನು ಅವನ ಕುರಿತು ಇನ್ನೊಬ್ಬನ ಉತ್ತಮ ಸ್ನೇಹಿತನ ಬಳಿ ಹಿಂದೆ ದೂರುವುದನ್ನು ಕಲ್ಪಿಸಿಕೊಳ್ಳಿರಿ ಆ ಸ್ನೇಹಿತನು ಹಿಂತಿರುಗೆ ಬಂದಾಗ ಅವನ ಸ್ನೇಹಿತನು ಸಂಪೂರ್ಣವಾಗಿ ಬೇರೆ ರೀತಿಯಲ್ಲಿ ವರ್ತಿಸುವುದನ್ನು ಕಾಣುತ್ತಾನೆ. ಇದು ಅವನ ಸುತ್ತಲೂ ಒಬ್ಬ ಚಾಡಿಕೋರನ ನಿಮಿತ್ತದಿಂದ ಉಂಟಾಗಿದೆ. ಅದೇ ರೀತಿಯಾಗಿ ಜನರ ಕುರಿತು ಉದ್ಧೇಶ ಪೂರ್ವಕವಲ್ಲದ ಹರಟೆಗಳನ್ನು ನಾವು ಹೊಡೆಯುವಾಗ

ಜನರ ನಡುವೆ ಸಂಬಂಧಗಳನ್ನು ಹಾಳು ಮಾಡುವ ಜಗಳದ ಬೀಜಗಳನ್ನು ನಾವು ಬಿತ್ತುವವರಾಗಿರುತ್ತೇವೆ. ಆದ್ದರಿಂದ ಇತರೆ ಜನರ ಬಗ್ಗೆ ಮಾತಾನಾಡುವಾಗ ನಾವು ಬಹಳ ಜಾಗರೂಕತೆಯಿಂದ ಇರಬೇಕು

## ವಿವಾದಾಸ್ಪದ ಅಥವಾ ಜಗಳವಾಡುವುದು

ಜ್ಞಾನೋಕ್ತಿಗಳು 26:21

**ಕೆಂಡಕ್ಕೆ ಇದ್ದಲು ಉರಿಗೆ ಕಟ್ಟಿಗೆ, ವ್ಯಾಜ್ಯದ ಕಿಚ್ಚನ್ನೆಬ್ಬಿಸುವುದಕ್ಕೆ ಜಗಳಗಂಟಿಗ.**

ಒಬ್ಬ ವಿವಾದಾಸ್ಪದ ವ್ಯಕ್ತಿಯೊಡನೆ ನಾವು ಏನೇ ಹೇಳಿದರೂ ಅಥವಾ ಕಾರ್ಯ ಮಾಡಿದರೂ ಅವನು ಕೋಪಗೊಳ್ಳಲೂ ಕಾರಣವಾಗುತ್ತದೆ. ಅವನ ವ್ಯಕ್ತಿತ್ವದ ಭಾಗವಾಗಿವಂತಹದ್ದು ಅವನಲ್ಲಿ ಕಲಹವನ್ನೆಬ್ಬಿಸುವವನಾಗಿರಲೂ ಕಾರಣವಾಗುತ್ತದೆ ಮತ್ತು ಎಲ್ಲರೊಂದಿಗೆ ಸಂಬಂಧಗಳನ್ನು ಮುರಿದು ಹಾಕಿಕೊಳ್ಳುವ ಜಗಳ ಸೃಷ್ಟಿಸುತ್ತದೆ. ಇದು ಇತರ ಜನರು ತಪ್ಪಾದ್ದರ ನಿಮಿತ್ತದಿಂದಲ್ಲ ಆದರೆ ಅವನಲ್ಲಿ ಇರುವಂತಹ ತಪ್ಪಾದದು ಅವನಲ್ಲಿ ಕಲಹವುಳ್ಳವನಾಗಿರುವಂತೆ ಮಾಡುತ್ತದೆ.

## ಗರ್ವ

ಜ್ಞಾನೋಕ್ತಿಗಳು 28:25

**ಆಸೆ ಬಡುಕನು ಜಗಳವನ್ನೆಬ್ಬಿಸುವನು ಯೆಹೋವನಲ್ಲಿ ಭರವಸವಿಡುವವನು ಪುಷ್ಟನಾಗುವನು.**

ಒಂದು ಯೋಜನೆಯು ಹೇಗೆ ಮುಂದುವರಿಯಲ್ಪಟ್ಟಬೇಕು ಎಂಬುದಾಗಿ ಒಂದು ಸಮಾವೇಶ ಕೊಠಡಿಯಲ್ಲಿ ಚರ್ಚಿಸುತ್ತಿರುವ ಒಂದು ತಂಡದ ಉದಾಹರಣೆಯನ್ನು ಪರಿಗಣಿಸೋಣ. ನೀವು ಸಹ ಆ ತಂಡದ ಭಾಗವಾಗಿದ್ದೀರಿ ಎಂಬುದಾಗಿ ಊಹಿಸಿಕೊಳ್ಳಿರಿ ಮತ್ತು ನೀವು ಒಂದು ಶ್ರೇಷ್ಟವಾದ ವಿಶ್ವವಿದ್ಯಾನಿಲಯದಿಂದ ಪದವಿ ಪಡೆದುಕೊಂಡಿರುವಂತೆ ನಿಮ್ಮ ತಂಡದ ನಾಯಕನು ತೆಗೆದುಕೊಂಡಿಲ್ಲ ಎಂಬುದಾಗಿ ನೀವು ಪೂರ್ವಕಲ್ಪಿತರಾಗಿರುತ್ತೀರಿ ಮತ್ತು ಮಾಡಬೇಕಾಗಿರುವ ಕೆಲಸದ ಕುರಿತು ನಿಮ್ಮ ಬದಲಿಗೆ ಸಲಹೆಗಳನ್ನು ಅವನು ನಿರ್ವಹಿಸುತ್ತಿರುವುದನ್ನು ನೋಡಿ ನೀವು ಸಿಟ್ಟುಗೊಳ್ಳುತ್ತೀರಿ. ಅವನ ಅಧಿಕಾರಕ್ಕೆ ನಿಮ್ಮನ್ನು ಒಪ್ಪಿಸಿಕೊಡುವುದನ್ನು ಮಾಡಲೂ ನಿಮ್ಮ ಗರ್ವವು ಆಸ್ಪದ ನೀಡುತ್ತಿಲ್ಲ ಯಾಕೆಂದರೆ ಅವನಿಗಿಂತಲೂ ನೀವು ಉತ್ತಮವಾದ ಕೆಲಸ ಮಾಡುತ್ತಿರಿ ಎಂಬುದಾಗಿ ಆಲೋಚನೆ ಮಾಡುತ್ತಿರುತ್ತೀರಿ. ಇದು ಜಗಳಕ್ಕೆ

ಕಾರಣವಾಗುತ್ತದೆ. ಇತರರ ಉತ್ತಮ ಆಲೋಚನೆಗಳನ್ನು ಅಂಗೀಕರಿಸಲೂ ನಾವು ಗರ್ವವುಳ್ಳವರಾದರೆ ಅಥವಾ ಮತ್ತೊಬ್ಬನು ಕೆಲಸ ನಿರ್ವಹಿಸುವ ರೀತಿಯನ್ನು ಅಂಗೀಕರಿಸುವುದನ್ನು ಕೇವಲ ಇದು ನಮ್ಮ ಮಾರ್ಗಗಳಿಗಿಂತ ಭಿನ್ನವಾಗಿದೆ ಇಂದು ತಿರಸ್ಕರಿಸಿದರೆ ಇತರರೊಂದಿಗಿನ ನಮ್ಮ ಸಂಬಂಧದಲ್ಲಿ ನಾವೆಲ್ಲರೂ ಜಗಳಗಳಿಗೆ ಕಾರಣವನ್ನುಂಟು ಮಾಡುತ್ತೇವೆ.

## ಸ್ವಾರ್ಥ ಹೆಬ್ಬಯಕೆ

ಲೂಕ 22:20–27

**ಊಟವಾದ ಮೇಲೆ ಆತನು ಅದೇ ರೀತಿಯಾಗಿ ಪಾತ್ರೆಯನ್ನು ತೆಗೆದುಕೊಂಡು ಈ ಪಾತ್ರೆಯು ನಿಮಗೋಸ್ಕರ ಸುರಿಸಲ್ಪಡುವ ನನ್ನ ರಕ್ತದಿಂದ ಸ್ಥಾಪಿತವಾಗುವ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ ಆದರೂ ನೋಡಿರಿ ನನ್ನನ್ನು ಹಿಡುಕೊಡುವವನು ನನ್ನೊಡನೆ ಮೇಜಿನ ಮೇಲೆ ಕೈಯಿಟ್ಟು ಊಟ ಮಾಡುತ್ತಿದ್ದಾನೆ ಮನುಷ್ಯಕುಮಾರನು ನೇಮಕವಾದ ಪ್ರಕಾರ ಹೊರಟು ಹೋಗುತ್ತಾನೆ ಸರಿ ಆದರೆ ಹಿಡುಕೊಡುವ ಮನುಷ್ಯನ ಗತಿಯನ್ನು ಏನು ಹೇಳಲಿ ಅಂದನು. ಇದನ್ನು ಕೇಳಿ ಅವರು ಇಂಥ ಕೆಲಸವನ್ನು ಮಾಡಬೇಕೆಂದಿರುವವನು ನಮ್ಮಲ್ಲಿ ಯಾವನಾಗಿರಬಹುದು ಎಂದು ಒಬ್ಬರನೊಬ್ಬರು ಕೇಳ ತೊಡಗಿದರು. ಇದಲ್ಲದೆ ತಮ್ಮಲ್ಲಿ ಯಾವನು ಹೆಚ್ಚಿನವನೆನಿಸಿಕೊಳ್ಳುವವನು ಎಂಬ ವಿಷಯದಲ್ಲಿ ಅವರೊಳಗೆ ಚರ್ಚೆ ಹುಟ್ಟಿತು. ಆಗ ಆತನು ಅವರಿಗೆ ಅನ್ಯದೇಶದ ಅರಸರು ತಮ್ಮ ತಮ್ಮ ಜನಗಳ ಮೇಲೆ ದೊರೆತನ ಮಾಡುತ್ತಾರೆ ಮತ್ತು ಅವರ ಮೇಲೆ ಅಧಿಕಾರ ನಡೆಸುವವರು ಧರ್ಮಿಷ್ಟರೆನಿಸಿಕೊಳ್ಳುತ್ತಾರೆ. ನೀವು ಹಾಗಿರಬಾರದು ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಂತಾಗಬೇಕು. ಮುಖ್ಯಸ್ಥನು ಸೇವಕನಂತಾಗಬೇಕು. ಯಾವನು ಹೆಚ್ಚಿನವನು ಊಟಕ್ಕೆ ಕೂತವನೋ ಸೇವೆ ಮಾಡುವವನೋ? ಊಟಕ್ಕೆ ಕೂತವನಲ್ಲವೇ ಆದರೆ ನಾನು ನಿಮ್ಮಲ್ಲಿ ಸೇವೆ ಮಾಡುವವನಂತಿದ್ದೇನೆ.**

ಆತನ ಶಿಲುಬೆಯ ಮರಣ್ದ ಸಿದ್ಧತೆಗಾಗಿ ಆತನು ಉದ್ಧೇಶ ಪೂರ್ವಕವಾಗಿ ಕರ್ತನ ಮೇಜನ್ನು ಏರ್ಪಡಿಸಿದ್ದು ಆತನ ಶಿಷ್ಯರೊಂದಿಗೆ ಯೇಸುವಿನ ಅಂತಿಮ ಭೋಜವಾಗಿತ್ತು. ಅವರನ್ನು ಬಿಟ್ಟು ಅಗಲುವುದು ಮತ್ತು ಶಿಲುಬೆಗೆ ಏರಿಸಲ್ಪಡುತ್ತಾನೆ ಎಂಬುದನ್ನು ಆತನ ಶಿಷ್ಯರು ತಿಳಿದುಕೊಳ್ಳಬೇಕೆಂದು ಆತನು ಪ್ರಯತ್ನಿಸಿದನು. ಆದರೆ ಯೇಸುವು ಬಿಟ್ಟು ದೂರ ಹೋಗುತ್ತಾನೆಂಬುದನ್ನು ಕೇಳಿದ್ದಂತಹ ಆತನ ಶಿಷ್ಯರುಗಳು ನಿಜವಾದ ಕಾಳಜಿಯು ಏನಾಗಿತ್ತೆಂಬುದನ್ನು ಗಮನಿಸಿರಿ. ಯೇಸುವಿನ ನಂತರ ಯಾರು ಮುಂದಿನ ದೊರೆ (BOSS) ಎಂಬಂತಹ ಕಲಹವು ಶಿಷ್ಯರುಗಳ ಮಧ್ಯದಲ್ಲಿ

ಎದ್ದಿತ್ತು. ಇವರು ಯೇಸುವಿನ ಜೊತೆಗೂಡಿ ಇದ್ದವರು ಮತ್ತು ಆತನು ಪ್ರಸಂಗಿಸಿದ್ದನ್ನು ಬೋಧಿಸಿದ್ದನ್ನು ಅದ್ಭುತಗಳನ್ನು ಮಾಡಿದ್ದನ್ನು ನೋಡಿದವರು ಮತ್ತು ಕೇಳಿದ್ದವರು.

ಯಾರು ಹೆಚ್ಚಿನವನು ಎಂಬುದರ ಮೇಲೆ ಯೇಸುವು ಹೇಗೆ ಉತ್ತರಿಸಿದನೆಂಬುದನ್ನು ಗಮನಿಸಿರಿ. ಅವರು ಎಲ್ಲವನ್ನು ತಪ್ಪಾಗಿ ಅರ್ಥ ಮಾಡಿಕೊಂಡಿದ್ದಾರೆಂಬುದಾಗಿ ಅವರಿಗೆ ವಿವರಿಸಿದನು. ಅವರು ಲೋಕವನ್ನು ನೋಡುತ್ತಿರುವುದಾಗಿ ಮತ್ತು ಅವರು ಲೋಕದಲ್ಲಿ ನೋಡಿದವುಗಳ ಸುತ್ತಲೂ ತಮ್ಮನ್ನೇ ಮಾದರಿ ಮಾಡಿಕೊಳ್ಳುತ್ತಿದ್ದಾರೆಂಬುದಾಗಿ ಅವರಿಗೆ ಹೇಳಿದನು. ಮೇಲಿರುವಂತಹವನು ಲೋಕದ ರೂಢಿಯಲ್ಲಿ ಮೇಲಧಿಕಾರಿ ಅಥವಾ ದೊರೆಯಾಗಿರಬಹುದು ಆದರೆ ದೇವರ ದೃಷ್ಟಿಯಲ್ಲಿ ನಾಯಕನಾಗಿರುವಂತಹ ಒಬ್ಬ ಸೇವಕನ ಅನುಕರಣ ವ್ಯಕ್ತಿಯಾಗಿರಬೇಕು ಎಂಬುದಾಗಿ ಯೇಸು ಅವರಿಗೆ ಹೇಳಿದನು. ನಿಮ್ಮಲ್ಲಿ ಯಾವನೂ ಕನಿಷ್ಟವಾದವನಾಗಿರುವನೋ ಅವನನ್ನು ಗುರ್ತಿಸಿರಿ ಯಾಕೆಂದರೆ ಆ ವ್ಯಕ್ತಿಯೇ ನಿಮ್ಮ ಮುಂದಿನ ಮುಖ್ಯಸ್ಥನಾಗುವನು ಎಂಬುದಾಗಿ ಆತನು ಹೇಳಿದನು. ಹೀಗೆ ಸ್ವಾರ್ಥ ಹೆಬ್ಬಯಕೆ ಜಗಳಗಳಿಗೆ ಕಾರಣವಾಗುತ್ತವೆ.

## ಮನಸ್ತಾಪ (ತಪ್ಪು ತಿಳುವಳಿಕೆ)

ಅಪೊಸ್ತಲರ ಕೃತ್ಯಗಳು 6:1

**ಆ ದಿವಸಗಳಲ್ಲಿ ಶಿಷ್ಯರು ಹೆಚ್ಚುತ್ತಾ ಬರಲಾಗಿ ಅವರೊಳಗೆ ಗ್ರೀಕ್ ಭಾಷೆಯವರು ಇಬ್ರಿಯಭಾಷೆಯವರ ಮೇಲೆ ದಿನದಿನದ ಉಪಚಾರದಲ್ಲಿ ನಮ್ಮ ವಿಧವೆಯನ್ನು ಸರಿಯಾಗಿ ಪರಾಂಬರಿಸುವುದಿಲ್ಲವೆಂದು ಗೊಣಗುಟ್ಟಿದರು.**

ಯೆರೂಸಲೇಮಿನ ಸಭೆಯೊಳಗೆ ಜಗಳಗಳಿತ್ತು. ಕಾರಣವೇನೆಂದರೆ ಗ್ರೀಕ್ ಭಾಷೆ ಮಾತಾನಾಡುವ ಯೆಹೋದ್ಯರು (ಗ್ರೀಕ್ ಪಂಡಿತರು) ಇಬ್ರಿಯ ಭಾಷೆ ಮಾತಾನಾಡುವ ಯೆಹೊದ್ಯರ ಕುರಿತು ದೂರು ಹೇಳುತ್ತಿದ್ದರು ಯಾಕೆಂದರೆ ಪ್ರತಿದಿನದ ಉಪಚಾರದ ಹಂಚಿಕೆಯಲ್ಲಿ ವಿಧವೆಯರನ್ನು ಅವರು ಕಡೆಗಣಿಸಿದ್ದರು. ಅವರು ಈ ಸಮಸ್ಯೆಯನ್ನು ಅಪೊಸ್ತಲರ ಮುಂದೆ ತಂದರು ಮತ್ತು ಅದನ್ನು ಬಗೆಹರಿಸುವಂತೆ ಕೇಳಿಕೊಂಡರು. ಒಂದು ಪಂಥದವರಿಗೆ ಕೊಡಲ್ಪಟ್ಟಂತಹ ಗಮನವನ್ನು ಅವರು ಹೊಂದಿಕೊಳ್ಳಲಿಲ್ಲವೆಂಬ ಮನಸ್ತಾಪವು ಜಗಳಕ್ಕೆ ಕಾರಣವಾಯಿತು.

## ವ್ಯಕ್ತಿತ್ವದ ವ್ಯತ್ಯಾಸಗಳು

ಅಪೊಸ್ತಲರ ಕೃತ್ಯಗಳು 15:36-41

**ಕೆಲವು ದಿವಸಗಳಾದ ಮೇಲೆ ಪೌಲನು ಬಾರ್ನಬನಿಗೆ ನಾವು ಕರ್ತನ ವಾಕ್ಯವನ್ನು ಸಾರಿದ ಎಲ್ಲಾ ಊರುಗಳಿಗೆ ತಿರುಗಿ ಹೋಗಿ ಅಲ್ಲಿರುವ ಸಹೋದರರು ಹೇಗಿದ್ದಾರೆಂದು ನೋಡೋಣ ಬಾ ಎಂದು ಹೇಳಿದನು ಬಾರ್ನಬನು ಮಾರ್ಕನೆನಿಸಿಕೊಳ್ಳುವ ಯೋಹಾನನ್ನು ತಮ್ಮ ಸಂಗಡ ಕರೆದುಕೊಂಡು ಹೋಗಬೇಕೆಂದಿದ್ದಾಗ ಪೌಲನು ನಮ್ಮೊಂದಿಗೆ ಕೆಲಸಕ್ಕೆ ಬಾರದೆ ಪಂಪುಲ್ಯದಲ್ಲಿ ನಮ್ಮನ್ನು ಬಿಟ್ಟವನನ್ನು ಕರೆದುಕೊಂಡು ಹೋಗುವುದು ತಕ್ಕದಲ್ಲವೆಂದು ನೆನಸಿದನು. ಈ ವಿಷಯದಲ್ಲಿ ತೀಕ್ಷ್ಣವಾಗ್ವಾದವುಂಟಾಗಿ ಅವರು ಒಬ್ಬರನೊಬ್ಬರು ಅಗಲಿದರು. ಬಾರ್ನಬನು ಮಾರ್ಕನನ್ನು ಕರಕೊಂಡು ಸಮುದ್ರ ಮಾರ್ಗವಾಗಿ ಕುಪ್ರ ದ್ವೀಪಕ್ಕೆ ಹೋದನು. ಪೌಲನು ಸೀಲನನ್ನು ಆರಿಸಿಕೊಂಡು ಸಹೋದರರಿಂದ ಕರ್ತನ ಕೃಪಾಶ್ರಯಕ್ಕೆ ಒಪ್ಪಿಸಲ್ಪಟ್ಟವನಾಗಿ ಹೊರಟು ಸಿರಿಯ ಕಿಲಿಕ್ಯ ಸೀಮೆಗಳಲ್ಲಿ ಸಂಚರಿಸುತ್ತಾ ಸಭೆಗಳನ್ನು ದೃಢಪಡಿಸಿದನು.**

2 ತಿಮೊಥೆಯನಿಗೆ 4:11

**ಮಾರ್ಕನನ್ನು ಸಂಗಡ ಕರಕೊಂಡು ಬಾ ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ.**

ವ್ಯಕ್ತಿತ್ವದ ವ್ಯತ್ಯಾಸಗಳು ಜಗಳಗಳನ್ನು ಹುಟ್ಟಿಸುತ್ತವೆ ಯಾಕೆಂದರೆ ನಮ್ಮಲ್ಲಿ ಪ್ರತಿಯೊಬ್ಬರು ಒಂದು ವ್ಯತ್ಯಾಸಕರವಾದ ವ್ಯಕ್ತಿತ್ವವನ್ನು ಹೊಂದಿದ್ದಾರೆ ಮತ್ತು ವ್ಯತ್ಯಾಸಕರವಾಗಿ ಕಾರ್ಯಗಳನ್ನು ಮಾಡುತ್ತೇವೆ. ಅಪೊಸ್ತಲನಾದ ಪೌಲನು ಬಾರ್ನಬನ ನಡುವೆ ಜಗಳವನ್ನು ನಾವು ನೋಡುತ್ತೇವೆ. (ಅಪೊಸ್ತಲರ ಕೃತ್ಯಗಳು 15:36-41). ಒಟ್ಟಾಗಿ ಅವರ ಮೊದಲನೇ ಸುವಾರ್ತಾ ಪ್ರಯಾಣದಲ್ಲಿ ಅವರೊಂದಿಗೆ ಯೌವ್ವನಸ್ಥನಾದ ಮತ್ತು ಬಾರ್ನಬನ ಸಂಬಂಧಿಯಾದ ಮಾರ್ಕನೆನಿಸಿಕೊಳ್ಳುವ ಯೋಹಾನನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿದ್ದರು. ಯೋಹಾನ ಮಾರ್ಕನು ಒಂದು ಶ್ರೀಮಂತ ಮನೆಯವನು. (ಅಪೊಸ್ತಲರ ಕೃತ್ಯಗಳು ಪುಸ್ತಕವು ಅವನ ತಾಯಿಯು ದೊಡ್ಡ ಮನೆಯನ್ನು ಹೊಂದಿದ್ದಳು ಜನರು ಪ್ರಾರ್ಥನೆಗಾಗಿ ಅಲ್ಲಿ ಸೇರಿ ಬರುತ್ತಿದ್ದರು ಎಂಬುದಾಗಿ ಹೇಳುತ್ತದೆ). ಅವನು ಮನೆಯ ಸೌಕರ್ಯಗಳಿಗೆ ಹೊಂದಿಕೊಂಡವನಾಗಿದ್ದನು ಆದರೆ ಪೌಲನ ಮತ್ತು ಬಾರ್ನಬರೊಡನೆ ಹಡಗಿನಲ್ಲಿ ಪ್ರಯಾಣಿಸಬೇಕಿತ್ತು ಮತ್ತು ಬಹುಶಃ ಹಿಂತಿರುಗಿ ಕತ್ತೆಯ ಮೇಲೆ ಬರಬೇಕಾಗಿತ್ತು. ಸ್ವಲ್ಪ ಸಮಯದ ನಂತರ ಯೋಹಾನನಾದ ಮಾರ್ಕನು ಅಂತಹ ಎಲಾ ಕಷ್ಟದ ಕೆಲಸ ಮಾಡಲೂ ಸಮರ್ಥನಲ್ಲವೆಂದುಕೊಂಡು ಬಿಟ್ಟುಬಿಟ್ಟು ಮನೆಗೆ ಹಿಂತಿರುಗಬೇಕೆಂದಿದ್ದನು. ಪೌಲನ ಆ ಘಟನೆಯನ್ನು ಮರೆತಿರಲಿಲ್ಲ. ಆದ್ದರಿಂದ ಪೌಲ ಮತ್ತು ಬಾರ್ನಬರು ಅವರ

ಎರಡನೇ ಸುವಾರ್ತಾ ಪ್ರಯಾಣಕ್ಕೆ ಸಿದ್ಧವಾಗುವಾಗ ಬಾರ್ನಬನು ಅವರೊಂದಿಗೆ ಯೋಹಾನನೆಂಬ ಮಾರ್ಕನನ್ನು ಕರೆದುಕೊಂಡು ಹೋಗಬೇಕೆಂದಿದ್ದನು. ಪೌಲನು ಅದು ಜರಗಲೂ ತಿರಸ್ಕರಿಸಿದನೂ ಯಾಕೆಂದರೆ ಮೊದಲ ಪ್ರಯಾಣದಲ್ಲಿ ಜರುಗಿದ್ದನ್ನು ಅವನು ಜ್ಞಾಪಿಸಿಕೊಂಡಿದ್ದನು.

ಬಾರ್ನಬನು ಜನರುಗಳಿಗೆ ಎರಡನೇ ಅವಕಾಶವನ್ನು ಕೊಡುವುದರಲ್ಲಿ ನಂಬಿಕೆಯಿಟ್ಟ ಕರುಣೆಯುಳ್ಳ ಮತ್ತು ಅನುಕಂಪವುಳ್ಳ ಮನುಷ್ಯನಾಗಿದ್ದನು. ಆದರೆ ಪೌಲನು ಅದನ್ನು ಮಾಡಲೂ ಇಷ್ಟಪಡಲಿಲ್ಲ. ವ್ಯಕ್ತಿತ್ವದ ವ್ಯತ್ಯಾಸಗಳು ಹೀಗೆ ಜಗಳಗಳಿಗೆ ಕಾರಣವಾಗುತ್ತವೆ. ಆದರೆ ಪೌಲನು ತನ್ನ ಹಿಂದಿನ ವರುಷಗಳು ಬಹುಶಃ ಸ್ವಲ್ಪ ಕುಗ್ಗಿ ಹೋದ ನಂತರ ತಿಮೊಥೆಯನಿಗೆ ''ಮಾರ್ಕನನ್ನು ಸಂಗಡ ಕರಕೊಂಡು ಬಾ ಅವನು ನನಗೆ ಸೇವೆಗಾಗಿ ಉಪಯುಕ್ತನಾಗಿದ್ದಾನೆ'' (2 ತಿಮೊಥೆಯನಿಗೆ 4:11) ರಲ್ಲಿ ಹೇಳಿದ್ದಾನೆ. ಅಷ್ಟರಲ್ಲಿ ಮಾರ್ಕನೆನಿಸಿಕೊಳ್ಳುವ ಯೋಹಾನ ಆತ್ಮಿಕವಾಗಿ ಪರಿಪಕ್ವತೆ ಹೊಂದಿದ್ದನು.

## ಬಣಗಳು ಮತ್ತು ಸಂಚುಕೂಟ

1 ಕೊರಿಂಥದವರಿಗೆ 3:3–5

**ಯಾಕೆಂದರೆ ಇನ್ನೂ ಶರೀರಾಧೀನ ಸ್ವಭಾವವುಳ್ಳವರಾಗಿದ್ದೀರಿ ನಿಮ್ಮೊಳಗೆ ಹೊಟ್ಟೆಕಿಚ್ಚು ಜಗಳಗಳು ಇರುವಲ್ಲಿ ನೀವು ಶರೀರಾಧೀನ ಸ್ವಭಾವವುಳ್ಳವರಾಗಿದ್ದು ಕೇವಲ ನರಪ್ರಾಣಿಗಳಂತೆ ನಡೆಯುತ್ತಿರಲ್ಲವೇ ಒಬ್ಬನು–ನಾನು ಪೌಲನವನು ಎಂದು ಮತ್ತೊಬ್ಬನು ನಾನು ಅಪೊಲ್ಲೋಸನವನು ಎಂದು ಹೇಳುತ್ತಿರುವಾಗ ನೀವು ಕೇವಲ ನರಪ್ರಾಣಿಗಳಾಗಿದ್ದೀರಲ್ಲವೇ ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾಗಿದ್ದೀರಿ ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆ ಮಾಡುವವರಾಗಿದ್ದಾರೆ.**

ಕೊರಿಂಥದ ಸಭೆಯಲ್ಲಿ ಬಣಗಳು ಇದ್ದವು. ಒಂದು ಬಣದವರು ''ಪೌಲನ–ಬಗೆಯವರು'' ಎಂಬುದಾಗಿ ಮತ್ತು ಇನ್ನೊಂದು ಬಣದವರು ''ಅಪೊಲ್ಲೋಸನ–ಬಗೆಯ'' ಕ್ರೈಸ್ತರೆಂಬುದಾಗಿ ಹೇಳಿಕೊಳ್ಳುತ್ತಿದ್ದರು. ಹೀಗೆ ಒಂದೇ ಸಭೆಯಲ್ಲಿ ಒಂದು ಗುಂಪು ಪೌಲನನ್ನು ಇನ್ನೊಂದು ಗುಂಪು ಅಪೊಲ್ಲೋಸನನ್ನು ಬೆಂಬಲಿಸಿತ್ತು. ಸಭೆಯನ್ನು ಎಬ್ಬಿಸಲು ದೇವರು ಪೌಲನನ್ನು ಉಪಯೋಗಿಸಿದನು. ಆದರೆ ಸ್ವಲ್ಪ ಅವಧಿಯಲ್ಲಿಯೇ ಒಳ ಬಳಗಗಳು (ಸಂಚುಕೂಟ) ಸಭೆಯಲ್ಲಿ ರಚಿಸಲ್ಪಟ್ಟವು ಅದರ ಫಲಿತಾಂಶವಾಗಿ ಜಗಳ ಮತ್ತು ವಿಭಾಗ ಉಂಟಾಯಿತು.

ಪೌಲನು ಅವರನ್ನು ಗದರಿಸಿದನು ಯಾಕೆಂದರೆ ಅವರು ಇನ್ನೂ ಶರೀರಾಧೀನ ಸ್ವಭಾವವುಳ್ಳವರು ಮತ್ತು ಸಾಧಾರಣ ಜನರಂತೆ ವರ್ತಿಸುತ್ತಿದ್ದರು. ನೀವು ಕೆಲವರು ಪೌಲನವರು ಇತರರು ಅಪೊಲ್ಲೋಸನಿಗೆ ಸಂಬಂಧಿಸಿದವರು ಎಂಬುದಾಗಿ ಹೇಳುವದು ಸರಿಯಲ್ಲ ಎಂಬುದಾಗಿ ಹೇಳಿದನು. ಯೇಸುವಿನಲ್ಲಿ ಅವರು ನಂಬಿಕೆಯಿಟ್ಟ ಕಾರಣದಿಂದ ಪೌಲನು ಮತ್ತು ಅಪೊಲ್ಲೋಸನು ಬರೀ ದೇವರ ಸೇವಕರುಗಳೇ ಎಂಬುದಾಗಿ ಹೇಳಿದನು. ಪೌಲನೂ ಅಲ್ಲ ಅಪೊಲ್ಲೋಸನೂ ಅಲ್ಲ ಆದರೆ ದೇವರು ಯಜಮಾನನು.

ನಾವು ಸಹ ವಿಶ್ವಾಸಿಗಳ ಅಂಗವಾಗಿ ಅದೇ ಮನಸ್ಸುಳ್ಳವರಾಗಿರಬೇಕು ಸಭೆಯು ನಮ್ಮ ಕುರಿತಾಗಿ, ಅಥವಾ ಈ ವ್ಯಕ್ತಿಯದಾಗಿ ಅಥವಾ ಆ ವ್ಯಕ್ತಿಯದು ಎಂಬುದಾಗಿಯಲ್ಲ ಅಲ್ಲ ಆದರೆ ಯೇಸುವಿನ ಬಗ್ಗೆ ಮಾತ್ರವಾಗಿ. ''ನಾವು ಆ ಸಭಾಪಾಲಕರು ಕಡೆಯವರೂ'' ಅಥವಾ '' ಈ ನಾಯಕನು ಅಥವಾ ಆ ಸೇವಕನ ಕಡೆಯವರೂ'' ಎಂಬುದಾಗಿ ಹೇಳುವ ಸ್ಥಳಕ್ಕೆ ನಾವು ಬರಬಾರದು. ಇದು ಜರುಗಿದರೆ ಅಂಗದಲ್ಲಿ ಜಗಳಗಳು ಬರುವುದಕ್ಕೆ ಅವಕಾಶವನ್ನು ಇವು ಕಲ್ಪಿಸುತ್ತೆ. ಪ್ರಪಂಚದಾದ್ಯಂತ ಇರುವ ಸಭೆಗಳು ಮತ್ತು ಸೇವಾಸಂಸ್ಥೆಗಳನ್ನು ನೋಡುವಾಗ ಕೆಲವು ಸಭೆಗಳು ನಾಶವಾಗಿದ್ದಕ್ಕೆ ಕಾರಣವೇನೆಂದರೆ ನಿರ್ದಿಷ್ಟ ಸೇವಕರುಗಳಿಗೆ ಜನರು ಬೆಂಬಲ ನೀಡಿ ಇತರೆ ನಿರ್ದಿಷ್ಟ ಸೇವಕರುಗಳನ್ನು ಕೆಳಹಾಕಿರುವುದೇ ಆಗಿದೆ. ಪೌಲನು 1 ಕೊರಿಂಥದವರಿಗೆ 3 ರಲ್ಲಿ ''ಯಾವ ಮನುಷ್ಯನು ಮನುಷ್ಯನಲ್ಲಿ ಮಹಿಮೆ ಹೊಂದದಿರಲಿ'' ಎಂಬುದಾಗಿ ಬರೆಯುತ್ತಾನೆ. ನಾವೆಲ್ಲರು ನಮ್ಮ ದೃಷ್ಟಿಯನ್ನು ದೇವರ ಸೇವೆ ಮಾಡುವ ಮನುಷ್ಯ ಅಥವಾ ಸಭೆಯಲ್ಲಿನ ಕೆಲವು ನಾಯಕರ ಮೇಲೆಡದೇ, ಯೇಸುಕ್ರಿಸ್ತನ ಮೇಲೆ ನಮ್ಮ ದೃಷ್ಟಿಯಿಟ್ಟರೇ ನಾವು ಅಂಗಗಳಾಗಿ ಬಲವಾಗಿ ಬೆಳೆಯುತ್ತೇವೆ, ಸ್ಥಿರವಾಗಿ ಮತ್ತು ಐಕ್ಯವಾಗಿ ಇರುತ್ತೇವೆ. ಖಂಡಿತವಾಗಿಯು ಸಭೆಯಲ್ಲಿ ಇರಿಸಿರುವಂತಹ ನಾಯಕರುಗಳ ಅಧಿಕಾರಕ್ಕೆ ಗೌರವ ತೋರಬೇಕು. ಆದರೆ ಇವರ ಮೂಲಕವಾಗಿ ದೇವರು ನಮಗೆ ಸೇವೆ ಸಲ್ಲಿಸುತ್ತಿರುವ ಬರೀ ಸೇವಕರು ಎಂಬುದಾಗಿ ಈ ನಾಯಕರನ್ನು ತಿಳಿಯಬೇಕು. ನಿಮ್ಮ ಸ್ಥಳೀಯ ಸಭೆಯಲ್ಲಿ ಯಾರಾದರೂ ನಿಮಗೆ ಯಾರಿಗೆ ಬೆಂಬಲ ಅಥವಾ ಆದ್ಯತೆ ನೀಡುತ್ತೀರ ಅಂದರೆ ''ಸಭಾಪಾಲಕರಿಗೆ'' ಎಂಬುದಾಗಿ ಹೇಳಬೇಡಿರಿ. ''ಯೇಸುವಿಗೆ'' ಎಂದು ಹೇಳಿರಿ.

ಯೇಸುವಿನ ಮೇಲೆ ನಮ್ಮ ದೃಷ್ಟಿಯಿಟ್ಟವರಾಗಿ, ನಾವು ಇನ್ನೂ ಹೆಚ್ಚಾದ ಮೈಲಿಗಳು ಹೋಗಬಹುದ ಮತ್ತು ದೇವರು ನಮಗಾಗಿ ಹೊಂದಿರುವ ದೂರವನ್ನು

ತಲುಪಬಹುದು–ಆತನ ದೇಹವಾಗಿ–ನಮ್ಮನ್ನು ಯಾವುದು ಅಗಲಿಸಲಾರದು. ಸಭಾಪಾಲಕರು ಸಭೆಯನ್ನು ಒಗ್ಗಟ್ಟಾಗಿ ಯಾವುದೇ ವಿಭಾಗಗಳಿಲ್ಲದೆ ಇರಿಸಲು ಶಕ್ತರಾದರೆ ಅದು ನನಗೆ ಅಚ್ಚರಿಗೊಳಿಸುತ್ತದೆ. ತುಂಬಾ ಆಗಾಗ್ಗೆ ಸಭಾಪಾಲಕರು ಅಥವಾ ಸೇವಕರುಗಳು ಅವರ ಸಭೆಗಳೊಳಗೆ ಎರಡು ಅಥವಾ ಮೂರು ವಿಭಾಗಗಳಾಗಿ ಒಡೆದು ಹೋಗಿದೆ ಎಂಬುದಾಗಿ ನಾವು ಕೇಳಿದ್ದೇವೆ. ಅವರ ಸಭೆಯಲ್ಲಿ ಇಲ್ಲಿಯವರೆಗೆ ಅಂತಹ ಯಾವುದೇ ವಿಭಾಗಗಳು ಇಲ್ಲಿಯವರೆಗೆ ಆಗಿಲ್ಲ ಎಂಬುದಾಗಿ ಒಬ್ಬರೇ ಸಭಾಪಾಲಕರು ಮಾತ್ರ ನನಗೆ ಹೇಳಿದ್ದಾರೆ. ಆಲ್‌ಪೀಪಲ್ಸ್ ಸಭೆಯು ಈ ರೀತಿಯಾಗಿರಬೇಕೆಂದು – ದೇವರು ಕರೆದಷ್ಟು ದೊಡ್ಡದಾಗಿ ಬೆಳೆಯುವಂತದ್ದು, ಅನೇಕ ನಾಯಕರುಗಳನ್ನು ಮತ್ತು ಒಟ್ಟಾಗಿ ಸೇವೆ ಸಲ್ಲಿಸುವ ದೇವರ ಸೇವಕರುಗಳನ್ನು ಹೊಂದಿರುವುದಾಗಿ ಆದರೆ ಮತ್ತು ಯಾವುದೇ ಸಭಾಪಾಲಕರು, ನಾಯಕರು ಅಥವಾ ವಿಶ್ವಾಸಿಗಳ ಮೇಲೆ ನಮ್ಮ ದೃಷ್ಟಿಯನ್ನಿರಿಸದೇ ಯೇಸುವಿನ ಮೇಲೆ ದೃಷ್ಟಿಯನ್ನು ಇರಿಸಬೇಕು ಎಂಬುದಾಗಿ ನಾನು ಅಪೇಕ್ಷಿಸುತ್ತೇನೆ.

ಗಲಾತ್ಯದವರಿಗೆ 5:19–21

**ಶರೀರಭಾವದ ಕರ್ಮಗಳು ಪ್ರಸಿದ್ಧವಾಗಿಯೇ ಅವೆ ಯಾವುವೆಂದರೆ ಜಾರತ್ವ ಬಂಡುತನ, ನಾಚಿಕೆಗೇಡಿತನ, ವಿಗ್ರಹಾರಾಧನೆ, ಮಾಟ ಹಗೆತನ, ಜಗಳ ಹೊಟ್ಟೆಕಿಚ್ಚು, ಸಿಟ್ಟು, ಕಕ್ಷಭೇದ, ಭಿನ್ನಮತ, ಮತ್ಸರ, ಕುಡಿಕತನ, ದುಂದೌತಣ ಇಂಥವುಗಳೇ ಇವುಗಳ ವಿಷಯದಲ್ಲಿ ಇಂಥ ಕಾರ್ಯಗಳನ್ನ ನಡಿಸುವವರು ದೇವರ ರಾಜ್ಯಕ್ಕೆ ಬಾದ್ಯರಾಗುವುದಿಲ್ಲವೆಂದು ನಾನು ಹಿಂದೆ ಹೇಳಿದಂತೆಯೇ ಈಗಲೂ ನಿಮ್ಮನ್ನು ಎಚ್ಚರಿಸುತ್ತೇನೆ.**

ರೋಮಾಪುರದವರಿಗೆ 8:8

**ಶರೀರ ಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು.**

## ಊಹಾಪೋಹ ವಿಚಾರಗಳ ಮೇಲೆ ವಿವಾದ

1 ತಿಮೊಥೆಯನಿಗೆ 6:3–5

**ಯಾವನಾದರೂ ಬೇರೆ ವಿಧವಾದ ಉಪದೇಶವನ್ನು ಮಾಡಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಸ್ವಸ್ಥವಾದ ಮಾತುಗಳಿಗೂ ಭಕ್ತ್ಯನುಸಾರವಾದ ಉಪದೇಶಕ್ಕೂ ಸಮ್ಮತಿಸದೆ ಹೋದರೆ ಅವನು ಒಂದನ್ನೂ ತಿಳಿಯದೆ ಕುತರ್ಕ ವಾಗ್ವಾದಗಳನ್ನು ಮಾಡುವ ಭ್ರಾಂತಿಯಲ್ಲಿದ್ದು ಮದದಿಂದ ಕಣ್ಣುಗಾಣದವನಾಗಿದ್ದಾನೆ. ಇವುಗಳಿಂದ ಹೊಟ್ಟೆಕಿಚ್ಚು**

**ಜಗಳ ದ್ವೇಷಣೆ ದುಸ್ಸಂಶಯ ಇವುಗಳು ಉಂಟಾಗುತ್ತವೆ. ಇದಲ್ಲದೆ ಬುದ್ಧಿಗೆಟ್ಟು ಸತ್ಯಹೀನರಾಗಿದ್ದು ದೇವಭಕ್ತಿಯನ್ನು ಲಾಭಸಾಧನವೆಂದೆಣಿಸುವ ಈ ಮನುಷ್ಯರಲ್ಲಿ ನಿತ್ಯವಾದ ಕಚ್ಚಾಟಗಳು ಉಂಟಾಗುತ್ತವೆ.**

ಮಾತುಗಳು ಮತ್ತು ದೇವರ ವಾಕ್ಯದಲ್ಲಿ ನಿಜವಾಗಿ ಇರದಿರುವಂತಹ ಅಭಿಪ್ರಾಯಗಳ ಮೇಲೆ ವಾದ ಮಾಡುವುದು ಮತ್ತು ಚರ್ಚಿಸುವುದು ಜಗಳಕ್ಕೆ ಇನ್ನೊಂದು ಕಾರಣವಾಗಿದೆ. ಉದಾಹರಣೆಗೆ ಕೆಲವರು ಜನರಿಗೆ ದೀಕ್ಷಾಸ್ನಾನ ಮಾಡಿಸುವಾಗ-ನೀರಿನಲ್ಲಿ ಮುಳುಗಿಸುವಾಗ ಮುಂದಕ್ಕೆ ಅಥವಾ ಹಿಂದಕ್ಕೆ ಮುಳುಗಿಸುವುದರ ''ಸರಿಯಾದ ರೀತಿ'' ಕುರಿತು ವಾದಿಸುತ್ತಾರೆ. ಒಂದು ನಿರ್ದಿಷ್ಟವಾದ ರೀತಿಯಲ್ಲಿ ಅವರು ದೀಕ್ಷಾಸ್ನಾನ ಮಾಡಿಸಬೇಕೆಂಬುದಾಗಿ ಸತ್ಯವೇದದ ಇತಿಹಾಸಗಾರರು ಹೇಳುತ್ತಾರೆ ಎಂಬುದಾಗಿ ಎತ್ತಿ ಹೇಳುತ್ತಾರೆ. ಒಬ್ಬ ವ್ಯಕ್ತಿಯು ನೀರಿನ ಒಳಗಡೆ ಹೋಗಿ ಮತ್ತು ಬದುಕಿದವನಾಗಿ ಹೊರಗೆ ಬರುತ್ತಾನೋ ಅವನು ದೀಕ್ಷಾಸ್ನಾನ ಹೊಂದಿದವನು! ಎಂಬುದಾಗಿ ನಾನು ಹೇಳುತ್ತೇನೆ ಮತ್ತು ಅದರ ಬದಲಿಗೆ ಜನರ ಅಭಿಪ್ರಾಯಗಳ ಮೇಲೆ ಹೋರಾಟ ಮಾಡದೇ ವಿವಾದ ಸೃಷ್ಟಿಸದೇ ಇರುವ ಮತ್ತು ಜನರ ಅಭಿಪ್ರಾಯಗಳನ್ನು ಬದಿಗೊತ್ತಿ ದೇವರ ವಾಕ್ಯದ ಹಿತಕರದ ಮೇಲೆ ಒಪ್ಪಂದ ಮಾಡಿಕೊಳ್ಳಬೇಕು ಮತ್ತು ಕೇಂದ್ರಿಕರಿಸಿಕೊಳ್ಳಬೇಕು.

## ಮೂರ್ಖ ಪ್ರಶ್ನೆಗಳು

2 ತಿಮೊಥೆಯನಿಗೆ 2:23-25

**ಮೂಢರ ಬುದ್ಧಿಯಿಲ್ಲದ ವಿಚಾರಗಳು ಜಗಳಗಳಿಗೆ ಕಾರಣವಾಗಿವೆ ಎಂದು ತಿಳಿದು ಅವುಗಳ ಗೊಡವೆಗೆ ಹೋಗಬೇಡ. ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವುದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು. ಒಂದು ವೇಳೆ ದೇವರು ಆ ಎದುರಿಸುವವರ ಮನಸ್ಸನ್ನು ತನ್ನ ಕಡೆಗೆ ತಿರುಗಿಸಿ ಸತ್ಯದ ಜ್ಞಾನವನ್ನು ಅವರಿಗೆ ಕೊಟ್ಟಾನು.**

ಮೂರ್ಖವಾದ ಮತ್ತು ಅಜ್ಞಾನದ ಪ್ರಶ್ನೆಗಳನ್ನು ತಪ್ಪಿಸಿರಿ ಯಾಕೆಂದರೆ ಅವು ಜಗಳಗಳನ್ನು ಉಂಟು ಮಾಡುತ್ತವೆ. ಉದಾಹರಣೆಗೆ ಜಾನ್ ಎಂಬುವ ಕ್ರೈಸ್ತ ಕುಟುಂಬದ ಹಿನ್ನಲೆಯಿಂದ ಬಂದಿರುವ ಆದಾಗ್ಯೂ ಒಬ್ಬ ವಿಶ್ವಾಸಿಯಾಗಿರದ ನಿಮ್ಮ ಕಾಲೇಜಿನ ಸ್ನೇಹಿತನಿಗೆ ನೀವು ಸಾಕ್ಷಿ ಹೇಳಲೂ ತೀರ್ಮಾನಿಸಿದರೆ. ನೀವು ಮೃದುವಾಗಿ ಅವನು ಸಭೆಗೆ ಏಕೆ ಬರುತ್ತಿಲವೆಂದು ಕೇಳಿರಿ. ಅವನು ತಕ್ಷಣವೇ, ಪ್ರತೀಕಾರವಾಗಿ

''ಹೊಸದಾಗಿ-ಹುಟ್ಟಿದ ವಿಶ್ವಾಸಿಯ ವಿಧದಲ್ಲಿ'' ನೀನು ಸಹ ಒಬ್ಬನಾ ಎಂಬುದಾಗಿ ಕೇಳುತ್ತಾನೆ. ಅವನು ಪುನಃ ನಿಮಗೆ ಕಾಯಿನನು ಮತ್ತು ಹೇಬೆಲನೂ ಅವರ ಹೆಂಡತಿಯರನ್ನು ಎಲ್ಲಿಂದ ಪಡೆದುಕೊಂಡರು ಎಂಬುದಾಗಿ ನಿಮಗೆ ಹೇಳಿದರೆ ನೀವು ಹಂಚಿಕೊಳ್ಳುವಂತಹ ಎಲ್ಲದ್ದನ್ನು ಅವನು ಕೇಳಿಸಿಕೊಳ್ಳಬೇಕು ಎಂಬುದನ್ನು ಊಹಿಸಿಕೊಳ್ಳಿರಿ. ಆ ಪ್ರಶ್ನೆಯು ನಿಮ್ಮನ್ನು ಮೋಟುಗೋಳಿಸುತ್ತದೆ ಮತ್ತು ಆ ಪ್ರಶ್ನೆಗೆ ಉತ್ತರಿಸಲೂ ದೇವರಿಂದ ಜ್ಞಾನವನ್ನು ಕೇಳಲೂ ನೀವು ಪ್ರಾರಂಭಿಸುತ್ತೀರಿ. ನಿಮ್ಮ ಸ್ನೇಹಿತನಿಗೆ ಕಾಯಿನನ ಮತ್ತು ಹೇಬೆಲರೂ ಅವರ ಸಹೋದರಿಯರನ್ನು ಬಹುಶಃ ಮದುವೆಯಾಗಿರಬಹುದೆಂದು ಹೇಳಲೂ ತೀರ್ಮಾನಿಸುತ್ತೀರಿ ಮತ್ತು ಅವನು ಅದಕ್ಕೆ ಅಪಹಾಸ್ಯ ಮಾಡಬಹುದು. ನೀವು ಅಸಮಾಧಾನಗೊಂಡು ಅವನಿಂದ ಹೊರಗೆ ಹೊರಟು ಹೋಗುತ್ತೀರಿ.

ಹೀಗೆ ಜಗಳವನ್ನು ಪ್ರೇರಿಸುವಂತಹ ಪ್ರಶ್ನೆಗಳನ್ನು ಕಡೆಗಣಿಸುವುದು ಜ್ಞಾನವುಳ್ಳದ್ದಾಗಿದೆ. ದೇವರ ಸೇವಕರುಗಳಾದ ನಾವು ಜಗಳದಿಂದ ದೂರವಿರಬೇಕೆಂಬುದಾಗಿ ಪೌಲನು ನಮಗೆ ಎಚ್ಚರಿಸುತ್ತಾನೆ. ಸತ್ಯವೇದಕ್ಕೆ ಅನ್ವಯಿಸುವಂತಹ ಎಲ್ಲಾ ಪ್ರಶ್ನೆಗಳಿಗೆ ನಿಮಗೆ ಉತ್ತರ ಹೊಂದಿಕೊಳ್ಳುವ ಅವಶ್ಯಕತೆಯಿಲ್ಲ. ಅಂತಹ ಪ್ರಶ್ನೆಗಳಿಗೆ ಉತ್ತರಿಸುವುದು ಜಾನ್ ಇನ್ನೊಂದು ಪ್ರಶ್ನೆ ಕೇಳುವಂತೆ ಮಾಡುತ್ತದೆ ಆಮೇಲೆ ಅದು ತಾಪಗೊಂಡ ವಾದಗಳಾಗುತ್ತವೆ ಮತ್ತು ಬಹುಶಃ ಅವನೊಡನೆ ನಿಮ್ಮ ಸ್ನೇಹವನ್ನು ಮುರಿದುಕೊಳ್ಳುತ್ತೀರಿ. ಬದಲಿಗೆ ಜಾನ್ ಗೆ ಬಹಳವಾಗಿ ಉಪಯುಕ್ತವಾದಂತದನ್ನು ಹೇಳುವಂತದ್ದು ವಿವೇಚನೆಯುಳ್ಳದ್ದು ಆಮೇಲೆ ಅವನಿಗಾಗಿರುವ ಕ್ರಿಸ್ತ ಪ್ರೀತಿಯ ಕುರಿತು ಹಂಚಿಕೊಳ್ಳಿರಿ.

**ಬೇರೊಬ್ಬರ ಉತ್ತಮವಾದ ವಿಚಾರಗಳು ಅಥವಾ ಬೇರೊಬ್ಬರು ಕೆಲಸ ಮಾಡುವ ವಿಧಾನಗಳು ಬರೀ ನಮ್ಮ ವಿಧಾನಗಳಿಗಿಂತ ಭಿನ್ನವಾಗಿವೆ ಎಂಬುದರ ನಿಮಿತ್ತದಿಂದ ನಾವು ತುಂಬಾ ಗರ್ವಪಟ್ಟು ಅಂಗೀಕರಿಸಲೂ ತಿರಸ್ಕರಿಸಿದರೆ ಇತರರೊಂದಿಗಿನ ನಮ್ಮ ಸಂಬಂಧದಲ್ಲಿ ನಾವೆಲ್ಲರೂ ಜಗಳ ಹುಟ್ಟಿಸಲೂ ಕಾರಣರಾಗುತ್ತೇವೆ.**

# 3

# ಜಗಳದ ನಕಾರಾತ್ಮಕ ಪರಿಣಾಮಗಳು

ಯಾಕೋಬನು 3:16

**ಮತ್ಸರವೂ ಪಕ್ಷಭೇದವೂ ಇರುವ ಕಡೆ ಗಲಿಬಿಲಿಯೂ ಸಕಲವಿಧವಾದ ನೀಚಕೃತ್ಯಗಳೂ ಇರುವವು.**

## ಗೊಂದಲ ಮತ್ತು ಎಲ್ಲಾ ಕೆಟ್ಟ ಕೃತ್ಯಗಳಿಗೆ ಬಾಗಿಲು ತೆರೆಯುತ್ತದೆ

ಮತ್ಸರ, ಸ್ವಾರ್ಥ ಹೆಬ್ಬಯಕೆ ಮತ್ತು ಸ್ವ-ಹುಡುಕುವುದು ಇರುವಲ್ಲಿ ಜಗಳವು ಇರುತ್ತದೆ ಎಂಬುದಾಗಿ ಸತ್ಯವೇದ ಹೇಳುತ್ತದೆ. ನಾವು ಸಾಮಾನ್ಯವಾಗಿ ಗೊಂದಲ ಮತ್ತು ಎಲ್ಲಾ ನೀಚಕೃತ್ಯಗಳಿಗೆ ಬಾಗಿಲು ತೆರೆಯುತ್ತದೆ. ಇದು ಬಾಗಿಲನ್ನು ತೆರೆಯುವಂತೆ ಮಾಡುತ್ತದೆ ಮತ್ತು ಸೈತಾನನಿಗೆ ಒಳಗೆ ಬಂದು ಔತಣ ಮಾಡು ಎಂದು ಹೇಳುವುದಾಗಿದೆ. ಸೈತಾನನು ನಮ್ಮ ಜೀವಿತದಲ್ಲಿ ಅವನು ಬಯಸಿದ್ದನ್ನು ಮಾಡಲೂ-ರೋಗಗಳಿಂದ ನಮ್ಮ ದೇಹಗಳನ್ನು ಹಾನಿ ಮಾಡಲೂ ನಮ್ಮ ವ್ಯಾಪಾರ ವಹಿವಾಟು ಮತ್ತು ಕುಟುಂಬಗಳಲ್ಲಿ ಗೊಂದಲ ಸೃಷ್ಟಿಸಬಹುದು, ಖಿನ್ನತೆಗೆ ಕಾರಣವಾಗಬಹುದು, ಸೋಲು, ಹಣಕಾಸಿನ ಕೊರತೆ ಮುಂತಾದವುಗಳನ್ನು ಮಾಡಲೂ ನಾವು ಉಚಿತವಾದ ಪ್ರವೇಶವನ್ನು ಸೈತಾನನಿಗೆ ಕೊಡುವವರಾಗಿರುತ್ತೇವೆ. ನಾವು ಜಗಳಕ್ಕೆ ಇಳಿಯುವಾಗ ಪ್ರತಿಯೊಂದು ದುರಾತ್ಮ ಕಾರ್ಯಗಳಿಗೆ ಪ್ರವೇಶ ನೀಡುತ್ತದೆ.

ಉದಾಹರಣೆಗೆ, ಸಭೆಯು ಜಗಳ ಪ್ರವೇಶಿಸಲು ಅವಕಾಶ ನೀಡಿದರೆ, ಸಭೆಯು ಅತೀ ಬೇಗನೆ ಚೂರುಚೂರಾಗುತ್ತದೆ. ಸೈತಾನನು ಆ ಸಭೆಗೆ ಪ್ರವೇಶಿಸಲು ಅವಕಾಶವನ್ನು ತೆಗೆದುಕೊಳ್ಳುತ್ತಾನೆ ಮತ್ತು ಎಲ್ಲಾ ಬಗೆಯ ದುಷ್ಟಕೃತ್ಯಗಳನ್ನು ಸಭಿಕರ ಮಧ್ಯದಲ್ಲಿ ಮಾಡಲೂ ಅವರನ್ನು ನಾಶ ಮಾಡುವ ಕಾರ್ಯ ಮಾಡುತ್ತಾನೆ. ಅದೇ ರೀತಿಯಲಿ ಜಗಳವು ಮದುವೆಗಳಿಗೆ ಪ್ರವೇಶಿಸಿದರೆ ಹೆಂಡತಿ ಮತ್ತು ಗಂಡನ ನಡುವೆ ಘರ್ಷಣೆಗಳಿಂದಾಗಿ ಸೈತಾನನು ಆ ಮನೆಯನ್ನು ನಾಶ ಮಾಡುತ್ತಾನೆ. ನಾವೆಲ್ಲರು ಕಲಹಗಳನ್ನು ಹೊಂದಿದ್ದೇವೆ, ನಿರ್ದಿಷ್ಟ ಮದುವೆಗಳಲ್ಲಿ ಘರ್ಷಣೆಗಳು

ಎಲ್ಲ ಎಂಬುದಾಗಿ ಕೆಲವರು ಯೋಚಿಸಬಹುದು. ನನ್ನ ಹೆಂಡತಿಯಾದ ಏಮಿ ಮತ್ತು ನಾನು ಸಹ ನಮ್ಮ ಪಾಲು ಹೊಂದಿದ್ದೇವೆ. ಆದ್ದರಿಂದ ನಮ್ಮ ಜೀವಿತದಲ್ಲಿ ಜಗಳಗಳನ್ನು ಹೊರಗಡೆ ಇಡಲೂ ನಾವು ಅತ್ಯಂತವಾದ ಕಾರ್ಯ ಮಾಡದಿದ್ದರೆ, ವೈರಿಯು ಒಳಗೆ ಪ್ರವೇಶಿಸುತ್ತಾನೆ ಮತ್ತು ನಮ್ಮ ಮದುವೆಗಳನ್ನು ವಿಭಜನೆ ಮಾಡುತ್ತಾನೆ ಮತ್ತು ಜೀವಿತಗಳನ್ನು ನಾಶ ಮಾಡುತ್ತಾನೆ.

ಹೀಗೆ, ಇತರರು ಏನು ಹೇಳುತ್ತಾರೆ ಅಥವಾ ಮಾಡುತ್ತಾರೆ ಎಂಬುದನ್ನು ಅಮೂಲ್ಯವೆಂದು ಪರಿಗಣಿಸಿ ನಮ್ಮ ಜೀವಿತದಲ್ಲಿ ಜಗಳವಿಲ್ಲದೆ ಜೀವನ ಮಾಡಲೂ ದೇವರು ಯಾವಾಗಲೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳಬೇಕು. ಯಾವುದೇ ಕೆಟ್ಟ ಕಾರ್ಯಗಳು ನಮ್ಮ ಜೀವಿತದಲ್ಲಿ ಜರುಗಲೂ ಇಷ್ಟವಿಲ್ಲದಿದ್ದರೆ, ಇಂತಹ ಕ್ಯಾನ್ಸರಯುಕ್ತವಾದ ವಿಷಯ ಎಂಬುದಾಗಿ ಕರೆಯುವ ಜಗಳದಿಂದ ನಮ್ಮನ್ನು ನಾವೇ ಸಂರಕ್ಷಿಸಿಕೊಳ್ಳಬೇಕು.

# 4

# ನಿಮ್ಮ ಜೀವಿತದಿಂದ ಜಗಳವನ್ನು ಹೊರಗಡೆ ಇಡುವುದು

ಪ್ರತಿಯೊಬ್ಬರು ಜಗಳವನ್ನು ಅನುಭವಿಸುತ್ತಾರೆ! ನಾವೆಲ್ಲರೂ ಜನರೊಡನೆ ಜಗಳಕ್ಕೆ ಇಳಿಯುವಂತಹ ಕ್ಷಣಗಳನ್ನು ನಾವು ಹೊಂದಿರುತ್ತೇವೆ. ಆದರೆ ಜಗಳವು ಬಹಳ ಅಪಾಯಕಾರಿ ವಿಷಯವಾಗಿದೆ ಮತ್ತು ನಮ್ಮ ಜೀವಿತದಿಂದ ಇದನ್ನು ದೂರವಿರಿಸಲೂ ನಮ್ಮ ಅತ್ಯಮೂಲ್ಯವಾದ ಕಾರ್ಯ ಮಾಡಬೇಕು.

ಜ್ಞಾನೋಕ್ತಿಗಳು 17:1
**ವ್ಯಾಜ್ಯದ ಮನೆಯಲ್ಲಿ ತುಂಬಿದ ಔತಣಕ್ಕಿಂತಲೂ ಸಮಾಧಾನದ ಒಣತುತ್ತೇ ಮೇಲು.**

ದೊಡ್ಡದಾದ ಮನೆಯಲ್ಲಿನ ಔತಣದಲ್ಲಿ ಮತ್ತು ಸಂತೋಷದ ಸೂಚನೆಗಳನ್ನು ತೋರಿಸುವ ಆಡಂಬರದ ಜೀವಿತದಲ್ಲಿ ಜಗಳದಲ್ಲಿ ಜೀವಿಸುವುದಕ್ಕಿಂತ ಚಿಕ್ಕದಾದ ಸ್ಥಳದಲ್ಲಿ ಒಣತುತ್ತು ತಿನ್ನುವುದೇ ಉತ್ತಮವಾದುದಾಗಿದೆ.

ಜ್ಞಾನೋಕ್ತಿಗಳು 20:3
**ವ್ಯಾಜ್ಯಕ್ಕೆ ದೂರನು ಮಾನಕ್ಕೆ ಯೋಗ್ಯನು ಜಗಳವು ಪ್ರತಿಯೊಬ್ಬ ಮೂರ್ಖನಿಗೂ ಸಹಜ**

ಜಗಳಗಳನ್ನು ತಪ್ಪಿಸುವುದು ಗೌರವಯುತವಾದುದಾಗಿದೆ. ಯಾಕೆಂದರೆ ಯಾವುದೇ ಮೂರ್ಖನು ತೊಂದರೆಯಲ್ಲಿ ಸಿಲುಕಬಹುದು. ವ್ಯಾಜ್ಯವನ್ನು ಪ್ರಾರಂಭಿಸಲೂ ಹೆಚ್ಚಿನ ಬುದ್ಧಿಶಕ್ತಿ ತೆಗೆದುಕೊಳ್ಳುವುದಿಲ್ಲ ಆದರೆ ಒಬ್ಬ ಪುರುಷ ಅಥವಾ ಒಬ್ಬ ಸ್ತ್ರೀಯ ಘನತೆಯು ಜಗಳಕ್ಕೆ ಹೋಗಬಾರದೆಂಬುದನ್ನು ತೀರ್ಮಾನಿಸುತ್ತದೆ.

ಜ್ಞಾನೋಕ್ತಿಗಳು 20:3 (ಮೇಸೇಜ್ ಬೈಬಲ್)
**ಇದು ಒಂದು ಉತ್ತಮ ಗುಣ ನಡತೆಯ ಗುರುತು ಜಗಳಗಳನ್ನು ತಪ್ಪಿಸುವುದಾಗಿದೆ, ಆದರೆ ಮೂರ್ಖನು ಜಗಳಗಳನ್ನು ತೆಗೆದುಕೊಳ್ಳಲೂ ಪ್ರೀತಿಸುತ್ತಾನೆ.**

ನಮ್ಮ ಜೀವಿತಗಳಿಂದ ಜಗಳಗಳನ್ನು ದೂರವಿರಿಸುವುದು ಒಂದು ಉತ್ತಮ ಗುಣನಡತೆಯನ್ನು ಇರಿಸುವ ಗುರುತು ಆಗಿದೆ ಮತ್ತು ಇದರಿಂದ ದೂರವಿರುವುದು ಘನತೆಯುಳ್ಳದಾಗಿದೆ.

## ಜಗಳಕ್ಕೆ ಅವಕಾಶ ಕೊಡಬೇಡಿರಿ

ಜ್ಞಾನೋಕ್ತಿಗಳು 17:14 (ಮೇಸೇಜ್ ಬೈಬಲ್)
**ಜಗಳದ ಪ್ರಾರಂಭವು ಒಂದು ಅಣೆಕಟ್ಟಿನಲ್ಲಿ ಸೋರಿಕೆಯಾದಂತೆ ಆದ್ದರಿಂದ ಅದು ಸಿಡಿಯುವ ಮೊದಲು ಅದನ್ನು ನಿಲ್ಲಿಸಿ.**

ಉದಾಹರಣೆಗೆ, ಒಂದು ಲೋಟ ಕಾಫಿಯನ್ನು ನಿಮ್ಮ ಸ್ನೇಹಿತರೊಂದಿಗೆ ಕುಡಿಯುವಾಗ ಒಂದು ಸಂಭಾಷಣೆಯಲ್ಲಿ ನಾವು ಅನೇಕವಾದ ವಿವಿಧ ವಿಷಯಾಂಶಗಳ ಬಗ್ಗೆ ಮಾತಾಡುತ್ತಿರಬಹುದು ಮತ್ತು ಉತ್ತಮ ಕ್ರಿಕೆಟ್ ಆಟಗಾರನಾರು ಎಂಬುದನ್ನು ಕುರಿತು ಚರ್ಚಿಸಲು ಪ್ರಾರಂಭಿಸಬಹುದು. ನಾವು 'ಸಚಿನ್' ಎಂಬುದಾಗಿ ಹೇಳಬಹುದು ಮತ್ತು ಸ್ನೇಹಿತನು ಇತರೆ ಹೆಸರುಗಳನ್ನು ಹೇಳಬಹುದು ಮತ್ತು ಚರ್ಚೆಯು ಮುಂದುವರೆಯುತ್ತದೆ. ಆದರೆ 'ತಾಪಮಾನ' ಎಬ್ಬಿಸಲ್ಪಟ್ಟಿರುವುದನ್ನು ನಾವು ಗಮನಿಸಬಹುದು. ಒಂದು ಆಕಸ್ಮಿಕ, ಉತ್ತಮ ವಿಧಾನವುಳ್ಳ ಮತ್ತು ಉತ್ತಮ ಅರ್ಥವುಳ್ಳ ಚರ್ಚೆ, ಸಂಭಾಷಣೆಯು ತೀವ್ರತೆಯುಳ್ಳದ್ದಾಗಿ ತಿರುಗಿಬಿಡುತ್ತದೆ! ಇದು ಒಂದು ಗಂಭೀರವಾದ ಚರ್ಚೆಗೆ ನಡೆಸಲ್ಪಡುತ್ತದೆಂಬುದಾಗಿ ಗೋಚರಿಸುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಕೋಪಾದ್ವೇಗವು ಏರುತ್ತಿದೆ ಎಂಬುದಾಗಿ ತಿಳಿದ ಕ್ಷಣವೇ ಅಲ್ಲಿಯೇ ಚರ್ಚೆಯನ್ನು ನಿಲ್ಲಿಸುವುದು ಜ್ಞಾನವುಳ್ಳದ್ದಾಗಿದೆ. ನಾವು ವಿಷಯ ಬದಲಾಯಿಸಬೇಕು ಮತ್ತು ಬೇರೆ ಯಾವುದಾದರ ಕುರಿತು ಮಾತಾನಾಡಬೇಕು. ಅಂತಹ ಪರಿಸ್ಥಿತಿಗಳಿಂದ ಯಾವಾಗ ಹೊರಬರಬೇಕೆಂಬುದು ನಮಗೆ ತಿಳಿದಿರಬೇಕು. ಅಣೆಕಟ್ಟಿನಲ್ಲಿ ನಾವು ಒಂದು ಸೋರಿಕೆಯನ್ನು ಕಾಣುವಾಗ, ಅಣೆಕಟ್ಟು ಹೊಡೆಯುವುದಕ್ಕೆ ಮೊದಲು ಅದನ್ನು ಸರಿಪಡಿಸಬೇಕು. ಜಗಳಗಳಿಗೆ ಅವಕಾಶ ಕೊಡದೇ ಇರೋಣ!

## ನಿಮ್ಮ ಕೆಲಸವಷ್ಟೇ ಮಾಡಿ

ನಮ್ಮ ಸ್ವಂತ ಕೆಲಸವಷ್ಟೇ ಮಾಡುವುದು ಸಾಮಾನ್ಯವಾಗಿ ಕಾಣಿಸಬಹುದು ಆದರೆ ಕೆಲವುಬಾರಿ ಇದನ್ನು ಮಾಡುವುದು ತುಂಬಾ ಕಠಿಣವಾಗಿರುತ್ತದೆ. ನಾವು ಯಾವುದನ್ನು ಮಾಡಬೇಕೆಂಬುದಾಗಿ ನಾವು ಆಲೋಚಿಸುವುದು ಅವಶ್ಯಕ ಮತ್ತು ಇತರರು ಯಾವುದನ್ನು ಮಾಡಬೇಕೆಂಬುದಾಗಿ ಅವರು ಆಲೋಚಿಸುವುದು ಅವಶ್ಯಕ. ಇದು ಸಂಬಂಧಗಳಲ್ಲಿ ಜಗಳಗಳನ್ನು ತಪ್ಪಿಸುತ್ತದೆ.

ಜ್ಞಾನೋಕ್ತಿಗಳು 26:17

**ಒಬ್ಬನು ದಾರಿಯಲ್ಲಿ ಹೋಗುತ್ತಾ ಪರರ ವ್ಯಾಜ್ಯಕ್ಕೆ ಸೇರಿ ರೇಗಿಕೊಳ್ಳುವದು ನಾಯಿಯನ್ನು ಕಿವಿಹಿಡಿದ ಹಾಗೆ.**

ನಮ್ಮ ಭಾರತದಲ್ಲಿನ ನಗರಗಳ ಬೀದಿಗಳಲ್ಲಿ ಇಬ್ಬರು ರಸ್ತೆಗಳ ಮೇಲೆ ಯಾರಿಗೂ ತಿಳಿಯದಿರುವಂತಹ ವಿಷಯಗಳ ಮೇಲೆ ಜಗಳವಾಡುವುದನ್ನು ನಾವು ಅನೇಕ ಸಮಯಗಳಲ್ಲಿ ನೋಡುತ್ತೇವೆ. ಉದಾಹರಣೆಗೆ, ನಾವು ರಸ್ತೆಯಲ್ಲಿ ಪ್ರಯಾಣಿಸುವಾಗ ಒಂದು ಅಂತಹ ಜಗಳವನ್ನು ನೋಡಿದೆವು ಎಂಬುದಾಗಿ ಊಹಿಸಿಕೊಳ್ಳಿರಿ. ಆ ರಸ್ತೆಯ ಮೇಲೆ ನಡೆಯುತ್ತಿರುವ ಜಗಳಕ್ಕೆ ನಾವು ಅಪರಿಚಿತರಾಗಿದ್ದಾಗಲೂ ನಾವು ಆ ಪರಿಸ್ಥಿತಿಯ ''ಮುಖ್ಯ ನಾಯಧೀಶ'' ಆಗಿರಬೇಕೆಂಬುದಾಗಿ ಅಂದುಕೊಳ್ಳುತ್ತೇವೆ. ಇಬ್ಬರು ಕಡೆಯಲ್ಲಿನ ಜಗಳವನ್ನು ನಾವು ಕೇಳಿಸಿಕೊಳ್ಳುತ್ತೇವೆ. ಆಮೇಲೆ ನಾವು ತಿಳಿಯುವುದಕ್ಕೆ ಮೊದಲೇ ನಮ್ಮ ತೋಳುಗಳನ್ನು ಸುತ್ತಿಕೊಂಡು ಆ ಜಗಳದಲ್ಲಿ ತೊಡಗಿಸಿಕೊಳ್ಳುತ್ತೇವೆ. ತದನಂತರ ಆ ಒಂದು ವ್ಯಾಜ್ಯದಲ್ಲಿ ಏಕೆ ಅಥವಾ ಹೇಗೆ ತೊಡಗಿಕೊಂಡನೆಂದು ಆಶ್ಚರ್ಯ ಚಕಿತರಾಗುತ್ತೀರಿ. ಅದು ಅನಗತ್ಯವಾದ ತೊಂದರೆಗಳನ್ನು ಕೇಳಿಕೊಳ್ಳುವುದಾಗಿದೆ. ''ಪರರ ವ್ಯಾಜ್ಯಕ್ಕೆ ಸೇರಿ'' ರೇಗಿಸಿ ಕೊಳ್ಳುವುದು ನಾಯಿಯನ್ನು ಕಿವಿ ಹಿಡಿದ ಹಾಗೆ ಎಂಬುದಾಗಿ ಸತ್ಯವೇದವು ಎಚ್ಚರಿಸುತ್ತದೆ. ''ನಿನಗೆ ಅಪಕಾರ ಮಾಡದವನ ಸಂಗಡ ಸುಮ್ಮನೆ ಜಗಳವಾಡಬೇಡ'' (ಜ್ಞಾನೋಕ್ತಿಗಳು 3:30) ಹೇಳುತ್ತದೆ. - ಇದು ಒಂದು ಸಾಮಾನ್ಯ ಪ್ರಜ್ಞೆ ಮತ್ತು ಜ್ಞಾನೋಕ್ತಿಗಳು ಪುಸ್ತಕದಲ್ಲಿ ಹೇಳಿರುವಂತೆ - ನಮಗೆ ಯಾವುದೇ ಅಪಕಾರ ಮಾಡದೇ ರಸ್ತೆಯಲ್ಲಿ ಇಬ್ಬರು ಜಗಳವಾಡುತ್ತಿರುವ ಪ್ರಕರಣದಲ್ಲಿ ನಾವು ಯಾರಿಗೆ ನ್ಯಾಯವಾದದ್ದನ್ನು ನಿರ್ವಹಿಸುವುದು ಅವಶ್ಯಕವಾಗಿದೆ! ಆದರೆ ಅಂತಹ ಸಂದರ್ಭದಲ್ಲಿ ಅವರಿಗೆ ಸಹಾಯ ಮಾಡುವ ಹತಾಶೆಯಲ್ಲಿದ್ದರೆ ಒಬ್ಬ ಪೊಲೀಸ್‌ನನ್ನು ಕರೆದುಕೊಂದು ಬರುವುದು ವಿವೇಕವುಳ್ಳದ್ದಾಗಿದೆ. ಜೊತೆಗೆ ಬೇರೆ ಯಾರಾದೋ ತೊಂದರೆಯಿಂದ ದೂರವಿರಲೂ ಒಂದು ಒಳ್ಳೆಯ ಪ್ರಜ್ಞೆಯನ್ನು ಉಂಟು ಮಾಡುತ್ತದೆ. ನಾವು ಯಾವಾಗಲೂ ನಮ್ಮ ಸ್ವಂತ ಕೆಲಸವಷ್ಟೇ ಮಾಡಬೇಕು ಮತ್ತು ನಿಮ್ಮದಲ್ಲದ ತೊಂದರೆಗಳಿಗೆ ಎಂದಿಗೂ ಸಿಲುಕಿಕೊಳ್ಳಬೇಡಿರಿ.

## ನಿಮ್ಮ ಪ್ರಚೋದನೆಗಳನ್ನು ಕಾಯಿರಿ

ಅನೇಕ ಸಮಯಗಳಲ್ಲಿ ನಮ್ಮ ಪ್ರೇರಣೆಗಳು ತಪ್ಪಾಗಿರುತ್ತದೆ. ನಾವು ಜಗಳಗಳಿಂದ ಪ್ರೇರಣೆಗೊಂಡರೆ ನಾವು ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ.

ಫಿಲಿಪ್ಪಿಯವರಿಗೆ 2:3

**ಪಕ್ಷಪಾತದಿಂದಾಗಲಿ ಒಣ ಹೆಮ್ಮೆಯಿಂದಾಗಲಿ ಯಾವುದನ್ನೂ ಮಾಡದೆ ಪ್ರತಿಯೊಂಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಟರೆಂದು ಎಣಿಸಲಿ.**

ಜಗಳದಿಂದ ಪ್ರೇರಿತಗೊಂಡ ಯಾವುದನ್ನು ನಾವು ಮಾಡಬಾರದು ಉದಾಹರಣೆಗೆ ನಮಗೆ ಅಸಮಾಧಾನಗೊಳಿಸುವ ಇ-ಮೇಲ್‌ನ್ನು ಯಾರಾದರೂ ಕಳುಹಿಸಿದರೆ ಮುಂದಿನ ದಿನ ಆ ವ್ಯಕ್ತಿಗೆ ಒಂದು ವೈರಸ್ ಕಳುಹಿಸಲೂ ತೀರ್ಮಾನ ಮಾಡಬಾರದು! ನಾವು ಅದನ್ನು ಮಾಡಿದರೆ, ನಮ್ಮ ಜೀವಿತದಲ್ಲಿ ಒಂದು ದೊಡ್ಡ ಲಘು ಟಿಪ್ಪಣಿಯನ್ನು ಜಗಳಕ್ಕೆ ಕೊಡುವುದಾಗಿರುತ್ತದೆ.

ಯಾಕೋಬನು 4:1,2

**ನಿಮ್ಮಲ್ಲಿ ಯುದ್ಧಗಳೂ ಕಾದಾಟಗಳೂ ಎಲ್ಲಿಂದ ಹುಟ್ಟುತ್ತವೆ? ನಿಮ್ಮ ಇಂದ್ರಿಯಗಳಲ್ಲಿ ಹೋರಾಡುವ ಭೋಗಾಶೆಗಳಿಂದಲೇ ಅಲ್ಲವೇ ನೀವು ಆಶಿಸಿದರೂ ಹೊಂದದೆ ಇದ್ದೀರಿ. ನೀವು ಕೊಲೆಗಾರರಾಗುವಷ್ಟು ಹೊಟ್ಟೆ ಕಿಚ್ಚು ಪಟ್ಟಾದರೂ ಸಂಪಾದಿಸಲಾರದೆ ಇದ್ದೀರಿ. ನೀವು ಕಾದಾಡುತ್ತೀರಿ. ಯುದ್ಧ ಮಾಡುತ್ತೀರಿ, ನೀವು ದೇವರನ್ನು ಬೇಡಿಕೊಳ್ಳದ ಕಾರಣ ನಿಮಗೇನೂ ದೊರೆಯಲಿಲ್ಲ.**

ತಪ್ಪು ಪ್ರೇರಣೆಗಳಿಂದ ತಪ್ಪು ಕಾರ್ಯಗಳನ್ನು ಮಾಡುವಾಗ ನಮ್ಮ ಮಧ್ಯದಲ್ಲಿ ಜಗಳಗಳು ಮತ್ತು ಕಾದಾಟಗಳಿರುತ್ತವೆ. ಆದ್ದರಿಂದ ನಮ್ಮ ಪ್ರೇರಣೆಗಳನ್ನು ಪರೀಕ್ಷಿಸಿಕೊಳ್ಳುವುದು ಮತ್ತು ಯಾವಾಗಲೂ ಅವುಗಳನ್ನು ಸಂರಕ್ಷಿಸಿಕೊಳ್ಳುವುದು ಅವಶ್ಯಕವಾಗಿದೆ. ಯಾರಾದರೂ ನಮಗೋಸ್ಕರವಾಗಿ ಮಾಡಿದಂತಹ ಕಾರ್ಯಗಳಿಗಾಗಿ ನಾವು ಜಗಳಗಳಿಂದ ಪ್ರೇರಿತಗೊಂಡು ತಿರುಗಿ ಅವರಿಗೆ ಕಾರ್ಯ ಮಾಡಬೇಕೆಂದಿದ್ದರೆ ಅದನ್ನು ನಾವು ಮಾಡಲೇಬಾರದು.

## ನಿಮ್ಮ ಮಾತುಗಳನ್ನು ಕಾಯಿರಿ

ನಮ್ಮ ಮಾತುಗಳಲ್ಲಿ ಬಹಳ ಜಾಗರೂಕರಾಗಿರಬೇಕು

ಜ್ಞಾನೋಕ್ತಿಗಳು 18:6

**ಜ್ಞಾನಹೀನನ ತುಟಿಗಳು ಜಗಳವನ್ನು ಹೂಡುತ್ತವೆ ಅವನ ಬಾಯಿ ಪೆಟ್ಟು ತಿನ್ನುವುದಕ್ಕೆ ಕೂಗಿಕೊಳ್ಳುತ್ತದೆ.**

ಮೂರ್ಖತನದ ಮಾತುಗಳನ್ನು ಮಾತಾಡುವುದು ನಮ್ಮನ್ನು ಜಗಳಗಳಿಗೆ ಇಳಿಸುತ್ತದೆ ಮತ್ತು ಅದಕ್ಕಾಗಿ ಉತ್ತಮವಾದ ತುಂಬಾ ಹೊಡೆತಗಳನ್ನು ಹೊಂದಿಕೊಳ್ಳುತ್ತೇವೆ. ಮೂರ್ಖತನದ ಮಾತುಗಳು ಜನರು ಹೆಣಗಾಟಗಳಿಗೆ ಒಳಗಾಗುತ್ತಾರೆ ಆದ್ದರಿಂದ ನಾವು ಮಾತಾನಾಡುವ ಮಾತುಗಳನ್ನು ನಾವು ಕಾಯ್ದುಕೊಳ್ಳಬೇಕು.

ಜ್ಞಾನೋಕ್ತಿಗಳು 22:10

**ಧರ್ಮನಿಂದಕರನ್ನು ಓಡಿಸಿಬಿಟ್ಟರೆ ಜಗಳವು ತೊಲಗುವದು ಹೌದು ವ್ಯಾಜ್ಯವು ತೀರಿ ಅವಮಾನವು ಇಲ್ಲವಾಗುವುದು.**

ಒಬ್ಬ ಅಪಹಾಸ್ಯಗಾರನಾದ ವ್ಯಕ್ತಿಯು ಯಾವುದನ್ನು ಹೇಳುವವನಲ್ಲ ಆದರೆ ವಿಮರ್ಶಾತ್ಮಕ ಮಾತುಗಳನ್ನಾಡುತ್ತಾರೆ. ಉದಾಹರಣೆಗೆ ಒಂದು ಹೊಸ ಕಂಪನಿಯಲ್ಲಿ ನೀವು ಕೆಲಸ ಪ್ರಾರಂಭಿಸಿದ್ದೀರಿ ಎಂಬುದಾಗಿ ಊಹಿಸಿಕೊಳ್ಳಿರಿ, ಅಲ್ಲಿ 25 ವರ್ಷಗಳಿಂದ ಕೆಲಸ ಮಾಡಿದಂತಹ ''ಮೆಚ್ಚತ್ತಕ್ಕ'' ವ್ಯಕ್ತಿಯನ್ನು ನೀವು ಪರಿಚಯಗೊಳ್ಳಬಹುದು. ಆ ಕಂಪನಿಯಲ್ಲಿ ನಡೆದಂತಹ ಎಲ್ಲವೂಗಳನ್ನು ತಿಳಿದಂತಹ ''ಹಳೆಕುದುರೆ'' ಎಂಬುದಾಗಿ ಅವನು ಹೇಳಬಹುದು. ಅಲ್ಲಿ ನಡೆದಂತಹ ಎಲ್ಲಾ ನಕಾರಾತ್ಮಕ ಘಟನೆಗಳು ಕುರಿತು ಅವನು ಅಬ್ಬರಿಸಿ ಮಾತಾನಾಡಲೂ ಪ್ರಾರಂಭಿಸಬಹುದು. ನಿಮಗೆ ಯಾವುದೇ ಒಳ್ಳೆಯದನ್ನು ಹೇಳಲೂ ಏನು ಎಲ್ಲ ಎಂಬುದಾಗಿ ಕಾಣಿಸಬಹುದು. ಕಂಪನಿಯಲ್ಲಿ ಪ್ರತಿಯೊಬ್ಬರ ಕುರಿತು ಅವನ ಎಲ್ಲಾ ದೂರುಗಳನ್ನು ಕೇಳಿದ 25 ವರ್ಷಗಳು ಅಂತಹ ಕೆಲಸದಲ್ಲಿ ಅವನು ಏಕೆ ಅಂಟಿಕೊಂಡಿದ್ದನ್ನು ಎಂಬುದಾಗಿ ನೀವು ಆಶ್ಚರ್ಯಚಕಿತರಾಗಬಹುದು ಅಂತಹ ವ್ಯಕ್ತಿಯು ಅಧಿಕವಾಗಿ ಜಗಳ ಉಂಟು ಮಾಡುತ್ತಾನೆ ಮತ್ತು ಅವನನ್ನು ನಾವು ದೂರವಿರಿಸಬೇಕು ಎಂಬುದಾಗಿ ಸತ್ಯವೇದ ಹೇಳುತ್ತದೆ. ಆಮೇಲೆ ವಿವಾದ ಮತ್ತು ಜಗಳಗಳಿಂದ ತ್ಯಜಿಸಲ್ಪಡಬೇಕು.

ನಮ್ಮ ಮಾತುಗಳು ಆಗಾಗ್ಗೆ ತೊಂದರೆಯಲ್ಲಿ ನಮ್ಮನ್ನು ಸಿಲುಕಿಸುತ್ತದೆ. ಆದ್ದರಿಂದ ನಮ್ಮ ಮಾತುಗಳನ್ನು ನಾವು ಕಾಯ್ದುಕೊಳ್ಳಬೇಕು. ಕೆಲವು ಬಾರಿ ನಾವು ಮಾಡುವಂತಹ ಒಂದು ಹಗುರವಾಗ ನಾಡಿಯು ಜಗಳವನ್ನು ಸೃಷ್ಟಿಸುತ್ತದೆ. ನಮ್ಮ ಸ್ನೇಹಿತರುಗಳ ಕೂದಲೂಗಳ ಬಣ್ಣದ ಕುರಿತು ನಾವು ಗೇಲಿ ಮಾಡಬಹುದು ಆದರೆ ತಮಾಷೆಯಿಂದ ಹೇಳಿದ ಅಂತಹ ಮಾತುಗಳು ಅವರಿಗೆ ಅವಮಾನಕರವಾಗಬಹುದು, ಹೀಗೆ ನೋವಿಗೆ ಕಾರಣವಾಗಬಹುದು. ಅವರ ಕೂದಲಿಗೆ ಬಣ್ಣ ಹಾಕಿಸಲೂ ಅವರು ತುಂಬಾ ಹಣ ವೆಚ್ಚ ಮಾಡಿರಬಹುದು ಆದ್ದರಿಂದ ನಾವು ಹೇಳಿದ್ದು ಅವರಿಗೆ ಅವಮಾನ

ಉಂಟುಮಾಡಬಹುದು. ಇದು ಅವರ ಸ್ನೇಹವನ್ನು ನಮ್ಮಿಂದ ಅಗಲಿಸಬಹುದು. ಆದ್ದರಿಂದ ನಾವು ಬಹಳ ಜಾಗರೂಕರಾಗಿರಬೇಕು ಮತ್ತು ನಾವು ತೊಂದರೆಗಳಿಗೆ ಸಿಲುಕುವುದಿಲ್ಲ ಎಂಬುದಾಗಿ ಖಚಿತವಾಗಿ ನಮ್ಮ ಮಾತುಗಳನ್ನು ಜ್ಞಾನದಿಂದ ಆಡಬೇಕು ಇಂತಹ ಸಾಮಾನ್ಯ ಮಾತುಗಳ ಕುರಿತು ಕಾಳಜಿ ವಹಿಸುವುವು ಜಗಳಗಳಿಗೆ ಕಾರಣವಾಗಿರುವುದಿಲ್ಲ.

## ನಿಮ್ಮ ಕೋಪ ಹತೋಟಿಯಲ್ಲಿಟ್ಟುಕ್ಕೊಳ್ಳಿರಿ

ಜ್ಞಾನೋಕ್ತಿಗಳು 15:18

**ಕೋಪಿಷ್ಟನು ವ್ಯಾಜ್ಯವೆನ್ನೆಬ್ಬಿಸುವನು; ದೀರ್ಘಶಾಂತನು ಜಗಳವನ್ನು ಶಮನಪಡಿಸುವನು.**

ಒಬ್ಬ ಕೋಪಿಷ್ಟನು–ಕ್ರೋಧ ಮನುಷ್ಯನು ಜಗಳವನ್ನಬ್ಬಿಸುತ್ತಾನೆ! ಆದರೆ ಕೋಪಗೊಳ್ಳುವುದರಲ್ಲಿ ಶಾಂತನ ಜಗಳವನ್ನು ಶಮನ ಮಾಡುತ್ತಾನೆ. ನಾನು 12ನೇ ವಯಸ್ಸಿನಲ್ಲಿ ಮೊದಲು ರಕ್ಷಣೆ ಹೊಂದಿದಾಗ ನನ್ನ ಕ್ರೈಸ್ತ ನಂಬಿಕೆಯಲ್ಲಿ ಆಗ ತಾನೇ ಬೆಳೆಯುತ್ತಿರುವಾಗ 'ನಿಯಂತ್ರಣ ಮೀರಿದ' ಕೋಪಗೊಳ್ಳುವ ಒಂದು ಗಂಭೀರ ತೊಂದರೆ ಹೊಂದಿದ್ದೆನು! ನಾನು ತುಂಬಾ ಪ್ರೀತಿಸಿದಂತಹ ಫುಟಬಾಲ್ ಆಟವನ್ನು ಒಂದು ದಿನ ಆಡುವಾಗ ಒಬ್ಬ ಹುಡುಗನು ನನ್ನನ್ನು ಮುಗ್ಗರಿಸಿ ಬೀಳಿಸಿದನು. ನಾನು ತುಂಬಾ ಕೋಪಗೊಂಡು ಸುತ್ತಲೂ ತಿರುಗಿ ಅವನು ಯಾರು ಎಂಬುದನ್ನು ನೋಡದೇ ಅವನ ಹಿಂಭಾಗಕ್ಕೆ ಒದ್ದೆನು. ಅವನು ಒಬ್ಬ ವಿಶ್ವಾಸಿ ಎಂಬುದಾಗಿ ಸ್ವಲ್ಪ ಸಮಯದಲ್ಲೇ ಅರಿತುಕೊಂಡೆನು ಮತ್ತು ಇಬ್ಬರು ಒಂದೇ ಪ್ರಾರ್ಥನಾ ಗುಂಪಿನ ಭಾಗಗಳಾಗಿದ್ದೇವು! ಅದೇ ಅವನೊಂದಿಗಿನ ನನ್ನ ಸ್ನೇಹದ ಕೊನೆಯಾಗಿತ್ತು. ನಾವಿಬ್ಬರೂ ವಿಶ್ವಾಸಿಗಳಾಗಿದ್ದಾಗಲೂ ನಮ್ಮ ಶಾಂತತೆಯನ್ನು ಕಳೆದುಕೊಂಡಿದ್ದೇವು: ನಾನು ಕೋಪಗೊಂಡೆನು ಮತ್ತು ಅವನು ಅದರ ಕುರಿತು ಬಹುಶಃ ಮರೆಯಲಾಗದಂತಹ ರೀತಿಯಲ್ಲಿ ಅವನಿಗೆ ಗಾಯವನ್ನುಂಟು ಮಾಡಿದೆ. ಮುಂದಿನ ದಿನಗಳಲ್ಲಿ ಅದರ ಕುರಿತು ಪಶ್ಚಾತ್ತಾಪಪಟ್ಟೆನು. ಆ ಸ್ನೇಹಿತನು ದೇವರೊಂದಿಗಿನ ನನ್ನ ನಡೆಯಲ್ಲಿ ನನಗೆ ಅಧಿಕವಾಗಿ ಸಹಾಯ ಮಾಡಬಹುದಾಗಿತ್ತು ಆದರೆ ನನ್ನ ಸ್ನೇಹಿತನನ್ನು ಕಳೆದುಕೊಂಡೆನು ಯಾಕೆಂದರೆ ನನ್ನ ಕೋಪವನ್ನು ತಾಳಿಕೊಳ್ಳಲಾಗಲಿಲ್ಲ.

ಜ್ಞಾನೋಕ್ತಿಗಳು 16:32

**ದೀರ್ಘ ಶಾಂತನು ಶೂರನಿಗಿಂತಲೂ ಶ್ರೇಷ್ಟ ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಟ.**

ನಮ್ಮ ಕೋಪಗಳಿಗೆ ಆಳುವವರಾದರೆ, ಅರ್ನಾಲ್ಡ್ ಶ್ವಾರ್ಜಿನೆಗ್ಗರ್‌ಗಿಂತಲೂ ಉತ್ತಮರೆಂದು ಪರಿಗಣಿಸಲ್ಪಡುತ್ತೇವೆ! ಅವನಿಗಿಂತಲೂ ಅಧಿಕವಾದ ಬಲವನ್ನು ನಾವು ಹೊಂದಿದ್ದೇವೆ. ಯಾಕೆಂದರೆ ದೀರ್ಘ ಶಾಂತನು ಶೂರನಿಗಿಂತಲೂ ಶ್ರೇಷ್ಟನು ಮತ್ತು ತನ್ನನ್ನು ಆಳುವವನು ಪಟ್ಟಣವನ್ನು ಗೆದ್ದವನಿಗಿಂತಲೂ ಬಲಿಷ್ಟ ಎಂಬುದಾಗಿ ಸತ್ಯವೇದ ಹೇಳುತ್ತದೆ! ನಾನು ಕೋಪವನ್ನು ತಾಳಿಕೊಂಡರೆ ಬಲಿಷ್ಟನಾಗಿರುವುದಕ್ಕಿಂತ ಉತ್ತಮವಾದವನು ಮತ್ತು ಒಂದು ನಗರವನ್ನು ವಶಪಡಿಸಿಕೊಳ್ಳುವ ಒಬ್ಬ ಮನುಷ್ಯನಿಗಿಂತ ಉತ್ತಮನು ಎಂಬುದಾಗಿ ನನಗೇ ನಾನೇ ಹೇಳಿಕೊಳ್ಳುತ್ತೇನೆ. ನನಗೆ ನಾನೇ ಆಗಾಗ್ಗೆ ಜ್ಞಾನೋಕ್ತಿಗಳು 16:32ನ್ನು ನನ್ನ ಕೋಪವನ್ನು ಕಡಿಮೆ ಮಾಡಲೂ ಮತ್ತು ಶಾಂತಪಡಿಸಿಕೊಳ್ಳಲೂ ಸಹಾಯವಾಗಿ ಪುನಃ ಅದನ್ನು ಉಚ್ಚರಿಸಿಕೊಳ್ಳುತ್ತಿದ್ದೇನು. ಆದ್ದರಿಂದ ನೀವು ಮತ್ತು ನಾನು ಕೋಪವನ್ನು ತಾಳಿಕೊಂಡರೆ, ನಮ್ಮ ಜೀವಿತದಿಂದ ಜಗಳವನ್ನು ದೂರವಿರಿಸಬಹುದು.

ಜ್ಞಾನೋಕ್ತಿಗಳು 25:8

**ದುಡುಕಿ ನೆರೆಯವನ ಮೇಲೆ ವ್ಯಾಜ್ಯಕ್ಕೆ ಹೋಗಬೇಡ ಅವನು ನಿನ್ನ ಮಾನ ಕಳೆದ ಮೇಲೆ ಕಡೆಯಲ್ಲಿ ಏನು ಮಾಡಬಲ್ಲೆ, ನೋಡಿಕೋ!**

## ಅವಮಾನಗಳನ್ನು ನಿರ್ಲಕ್ಷಿಸುವ ಸಾಮರ್ಥ ಬೆಳೆಸಿಕೊಳ್ಳಿರಿ

ಜ್ಞಾನೋಕ್ತಿಗಳು 12:16

**ಮೂರ್ಖನ ಸಿಟ್ಟು ತಟ್ಟನೆ ರಟ್ಟಾಗುವುದು ಜಾಣನು ಅವಮಾನವನ್ನು ಮರೆಮಾಡುವನು.**

ಒಬ್ಬ ಮೂರ್ಖನ ಸಿಟ್ಟು ರಟ್ಟಾಗುವುದು. ಅವನು ಅವಮಾನಗೊಂಡರೆ ಕೂಡಲೇ ಪ್ರತೀಕಾರ ತೀರಿಸಿಕೊಳ್ಳುತ್ತಾನೆ. ಅದರ ಕುರಿತು ಆಲೋಚಿಸಲೂ ಅವನು ಸಮಯ ತೆಗೆದುಕೊಳ್ಳುವುದಿಲ್ಲ. ಆದರೆ ಜಾಣನು ಅವಮಾನವನ್ನು ಮರೆಮಾಡುವನು. ಅವನು ಪ್ರತಿಕ್ರಿಯೆ ತೋರಿಸುವುದಿಲ್ಲ. ಆದರೆ ಅದನ್ನು ಮರೆತುಬಿಡುವನು. ಅವಮಾನಗಳನ್ನು ನಿರ್ಲಕ್ಷಿಸುವ ಸಾಮರ್ಥ್ಯ ಬೆಳೆಸಿಕೊಳ್ಳಿರಿ. ನಾವುಗಳು ನಕಾರಾತ್ಮಕವಾಗಿ ಪ್ರತಿಕ್ರಿಯೆ ತೋರುವವರೆಗೂ ಅವಮಾನಗಳು ಬದಲಾಗುವುದಿಲ್ಲ. ಅವು ಬರೀ ಜನರ ಅಭಿಪ್ರಾಯಗಳು ನಾವು ಕ್ರಿಸ್ತನಲ್ಲಿ ನಿಜವಾಗಿ ಯಾರಾಗಿದ್ದೇವೆಂಬುದನ್ನು ನಾವು ತಿಳಿದರೆ ಬೇರೆಯವರು ನಮಗೆ ಅವಮಾನ ಮಾಡುವುದು ಮುಖ್ಯವಾಗಿರುವುದಿಲ್ಲ.

1 ಪೇತ್ರನು 2:23
**ಬೈಯುವವರನ್ನು ಆತನು ಪ್ರತಿಯಾಗಿ ಬೈಯಲಿಲ್ಲ ಆತನು ಬಾಧೆಯನ್ನನುಭವಿಸಿದಾಗ ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪು ಮಾಡುವಾತನಿಗೆ ತನ್ನ ಕಾರ್ಯವನ್ನು ಒಪ್ಪಿಸಿದನು.**

ಯೇಸುವು ಅವಮಾನಗೊಂಡಾಗ, ಆತನು ಪ್ರತೀಕಾರ ತೀರಿಸಿಕೊಳ್ಳಲಿಲ್ಲ ಮತ್ತು ನಾವು ಆತನ ಮಾದರಿ ಹಿಂಬಾಲಿಸಬೇಕು. ನಾವು ಅವಮಾನಗಳನ್ನು ನಿರ್ಲಕ್ಷಿಸಬೇಕು ಮತ್ತು ಬಾತುಕೋಳಿಯ ಹಿಂಭಾಗದಿಂದ ನೀರು ಹೋಗುವಂತೆ ಇದು ಹೋಗಲೂ ಅವಕಾಶ ನೀಡಿರಿ. ಆಮೇಲೆ ನಾವು ಕೋಪವನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತೇವೆ ಮತ್ತು ಆಕ್ರೋಶಗೊಳ್ಳುವುದಿಲ್ಲ.

## ಮೃದುತ್ವದೊಡನೆ ಪ್ರತಿಕ್ರಿಯಿಸುವ ಸಾಮರ್ಥ್ಯ ಬೆಳೆಸಿಕೊಳ್ಳಿರಿ

ಜ್ಞಾನೋಕ್ತಿಗಳು 15:1
**ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವುದು ಬಿರುನುಡಿಯು ಸಿಟ್ಟನ್ನೇರಿಸುವುದು.**

ಉದಾಹರಣೆಗೆ, ಯಾರಾದರೂ ಒಂದು ಜಗಳ ಪ್ರಾರಂಭಿಸಲೂ ನಿಮ್ಮ ಬಳಿ ಬಂದರೇ ಮತ್ತು ಆ ವ್ಯಕ್ತಿಯ ಬಾಯಿಂದ ಬರುವಂತಹ ಹೊಗೆಯು ಬರುತ್ತದೆಂದರೂ ಮತ್ತು ಅವನ ಮಾತುಗಳು ಕೆಂಪಾಗಿ ಕಂಡರೂ ಮತ್ತು ನಿಮ್ಮ ವಿರೋಧವಾಗಿ ಎಲ್ಲರೂ ಎಗರಲು ಸಿದ್ಧವಾಗಿರುವಾಗ ನಿಮ್ಮ ಶಾಂತವಾಗಿಯೇ ಇರ್ರಿ! ನೀವು ಅವರೊಂದಿಗೆ ಮೃದುವಾಗಿ ಉತ್ತರಿಸುವ ಪ್ರತಿಕ್ರಿಯೆ ತೋರಿಸುವಾಗ, ನಿಮ್ಮನ್ನು ಜಗಳದಿಂದ ದೂರವಿರಿಸಿಕೊಳ್ಳುತ್ತೀರಿ. ಒಂದು ಮೃದುವಾದ ಉತ್ತರವು ಕೋಪವನ್ನು ಶಮನಗೊಳಿಸುತ್ತದೆ! ಆದರೆ ನಮ್ಮಲ್ಲಿ ಅನೇಕರು ಇದಕ್ಕೆ ವಿರುದ್ಧವಾಗಿ ಪ್ರತಿಕ್ರಿಯೆ ತೋರಿಸುತ್ತಾರೆ. ಒಂದು ಅಸಮ್ಮತಿಯಲ್ಲಿ ನಾವುಗಳು ಯಾವಾಗಲೂ ಇತರ ವ್ಯಕ್ತಿಯನ್ನು–ಜೋರಾದ ಅಥವಾ ತೀವ್ರತೆಯಲ್ಲಿ ಕೈ ಮೀರುವಂತೆ ಪ್ರಯತ್ನಿಸುತ್ತೇವೆ ಮತ್ತು ಇದು ಪೂರ್ಣ ಪರಿಸ್ಥಿತಿಯನ್ನು ಉಲ್ಬಣಗೊಳ್ಳಲು ಮಾತ್ರ ಕಾರ್ಯ ನಿರ್ವಹಿಸುತ್ತದೆ. ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವುದು ಎಂಬುದಾಗಿ ಸತ್ಯವೇದ ಇದಕ್ಕಾಗಿಯೇ ಹೇಳುತ್ತದೆ ಮತ್ತೊಬ್ಬನು ಕೋಪಗೊಂಡರು, ನಾವು ಮೃದುವಾಗಿ ಪ್ರತಿಕ್ರಿಯೆ ತೋರಿಸಬೇಕು.

2 ತಿಮೊಥೆಯನಿಗೆ 2:24

**ಕರ್ತನ ದಾಸನು ಜಗಳವಾಡದೆ ಎಲ್ಲರ ವಿಷಯದಲ್ಲಿ ಸಾಧುವೂ ಬೋಧಿಸುವುದರಲ್ಲಿ ಪ್ರವೀಣನೂ ಕೇಡನ್ನು ಸಹಿಸಿಕೊಳ್ಳುವವನೂ ಎದುರಿಸುವವರನ್ನು ನಿಧಾನದಿಂದ ತಿದ್ದುವವನೂ ಆಗಿರಬೇಕು.**

ದೇವರ ಸೇವಕರುಗಳಾಗಿ ನಾವು ಜಗಳವಾಡಬಾರದು ಆದರೆ ಎಲ್ಲಾ ಜನರನ್ನು ಮೃದುವಾಗಿ ನೋಡಬೇಕು ಬೋಧಿಸಲೂ ಶಕ್ತರಾಗಿರಬೇಕು ಮತ್ತು ದೀರ್ಘ ಶಾಂತನಾಗಿರಬೇಕೆಂಬುದಾಗಿ ಸತ್ಯವೇದ ಉಪದೇಶಿಸುತ್ತದೆ. ಆದ್ದರಿಂದ ನಾವು ಮೃದುವಾಗಿ ಪ್ರತಿಕ್ರಿಯೆ ತೋರಿಸುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು ಮತ್ತು ಉದ್ರಿಕ್ತಗೊಂಡ ಪರಿಸ್ಥಿತಿಯಲ್ಲಿ ಮೃದುವಾಗಿ ಉತ್ತರಿಸಬೇಕು ಅನೇಕ ಸಮಯಗಳಲ್ಲಿ ಇದು ಸಂಗತಿಗಳನ್ನು ಶಾಂತವಾಗಿರಿಸುತ್ತದೆ ಮತ್ತು ನಮ್ಮ ಜೀವಿತದಿಂದ ಜಗಳವನ್ನು ದೂರವಿರಿಸಲೂ ಸಹಾಯ ಮಾಡುತ್ತದೆ.

## ಶರಣಾಗತರಾಗುವುದು

ನಾವು ಶರಣಾಗತರಾಗುವ ಸಾಮರ್ಥ್ಯವನ್ನು ನಾವು ಬೆಳೆಸಿಕೊಳ್ಳಬೇಕು. ಅನೇಕ ಸಮಯದಲ್ಲಿ ನಾವು ತಪ್ಪಾದ ವಿಷಯಗಳು–ನಿಜವಾಗಿಯೂ ಮುಖ್ಯವಾಗಿಲ್ಲದ್ದಂತಹ ವಿಷಯಗಳಿಗೆ ಮೊಂಡುತನವುಳ್ಳವರಾಗಿರುತ್ತೇವೆ ಮತ್ತು ನಮ್ಮ ಮೊಂಡುತನವು ನಮ್ಮ ಜೀವಿತದಲ್ಲಿ ಜಗಳಗಳಿಗೆ ಕಾರಣವಾಗುತ್ತದೆ! ಅಬ್ರಹಾಮನ ಮತ್ತು ಲೋಟನ ಉದಾಹರಣೆಯನ್ನು ಪರಿಗಣಿಸಿರಿ (ಆದಿಕಾಂಡ 13:1–18)

ಲೋಟನು ಅಬ್ರಹಾಮನ ಸಂಬಂಧಿಯಾಗಿದ್ದನು. ಅಬ್ರಾಮನಿಗೆ ದೇವರು ಕೊಡುವಂತಹ ದೇಶದಲ್ಲಿನ ಅವರ ಪ್ರಯಾಣದಲ್ಲಿ ಇಬ್ಬರು ಸಹ ದೊಡ್ಡದಾದ ಜಾನುವಾರಗಳು ಮತ್ತು ಒಂದು ದೊಡ್ಡದಾದ ಸೇವಕರುಗಳನ್ನು ಅಸಂಖ್ಯವಾಗಿ ಹೊಂದಿದ್ದರು. ಆಗಾಗ್ಗೆ ಅವರ ಆಯಾ ಸೇವಕರುಗಳು ಜಗಳವಾಡುತ್ತಿದ್ದರು ಮತ್ತು ಒಬ್ಬರಿಗೊಬ್ಬರು ಕಾದಾಟ ಮಾಡುತ್ತಿದ್ದರು. ಅವರ ಪ್ರಯಾಣದುದ್ದಕ್ಕೂ ಅಲ್ಲಿ ಬಹಳ ಜಗಳಗಳಿದ್ದವು! ಏನು ಜರುಗುತ್ತಿದೆ ಎಂಬುದು ಅಬ್ರಾಮನು ಅರಿತುಕೊಂಡನು ಮತ್ತು ಅವರ ಪ್ರಯಾಣದಲಿ ಈ ರೀತಿಯಾಗಿ ಹೋಗುವುದು ಉತ್ತಮವಾದುದಲ್ಲ ಎಂಬುದಾಗಿ ಲೋಟನಿಗೆ ಹೇಳಿದನು ಮತ್ತು ಅವನು ಲೋಟನಿಗೆ ದೇಶದ ಯಾವುದೇ ಭಾಗವನ್ನು ತೆಗೆದುಕೊಳ್ಳಲೂ ಹೇಳಿದನು ಮತ್ತು ಅವನು ವಿರುದ್ಧವಾದ ಮಾರ್ಗಕ್ಕೆ ಹೋಗುವುದಾಗಿ ಅವನಿಗೆ ಹೇಳಿದನು. ಲೋಟನು ತನಗೆ ಬೇಕಾದ ಪ್ರದೇಶವನ್ನು

ತೆಗೆದುಕೊಳ್ಳಲೂ ಅಬ್ರಾಮನು ವಾಸ್ತವವಾಗಿ ಶರಣಾಗತನಾದನು! ಅಥವಾ ಒಪ್ಪಿಸಿಕೊಟ್ಟನು!

ಲೋಟನು ಸುತ್ತಲಿನ ಪ್ರದೇಶವನ್ನೆಲ್ಲಾ ನೋಡಿದನು, ಸೊದೋಮ್ ಮತ್ತು ಗೊಮೋರ ಅದ್ಭುತವಾದ ಬಯಲು ಸೀಮೆ ನೋಡಿದನು ಮತ್ತು ಆ ಪ್ರದೇಶವು ಫಲವತ್ತಾಗಿದ್ದರಿಂದ ಅಲ್ಲಿಗೆ ಹೋಗಲೂ ಆರಿಸಿಕೊಂಡನು. ಅವನು ಜನರು ಮತ್ತು ಎಲ್ಲಾ ಜಾನುವಾರುಗಳನ್ನು ಅವನು ತೆಗೆದುಕೊಂಡು ಹೋದನು ಮತ್ತು ಅವರು ಸೋದೋಮ್ ಮತ್ತು ಗೊಮೋರಕ್ಕೆ ಹೋದರು. ಲೋಟನು ಪ್ರತ್ಯೇಕವಾಗಿ ಹೋದ ನಂತರ, ದೇವರು ಅಬ್ರಾಮನಿಗೆ ಎದ್ದು ಪ್ರದೇಶದ ಮೂಲಕ ಹಾದುಹೋಗಲೂ ಹೇಳಿದರು. ಅಬ್ರಹಾಮ ಕಾಲಿಡುವ ಪ್ರದೇಶಗಳನ್ನೆಲ್ಲಾ ಅವನಿಗೆ ಕೊಡುವುದಾಗಿ ದೇವರು ಹೇಳಿದನು ಮತ್ತು ಆ ಒಂದು ಸಮಯದಿಂದ ಅವನ ಕುರಿದನಗಳು ಅತ್ಯಧಿಕವಾಗಿ ಹೆಚ್ಚಳಗೊಂಡವು. ಅಬ್ರಹಾಮನ ಸೇವಕರುಗಳು ಸಹ ದೇವರು ಅವರ ಯಜಮಾನನನ್ನು ಆಶೀರ್ವದಿಸಿದ್ದಾನೆಂದು ಒಪ್ಪಿಕೊಂಡರು. ಸೊದೋಮ್ ಮತ್ತು ಗೊಮೋರಕ್ಕೆ ಲೋಟನು ಹೋಗಿ ಎಲ್ಲವೂ ನಾಶವಾಯಿತು ಮತ್ತು ಅವನೇ ಸ್ವತಃ ತನ್ನ ಜೀವಿತಕ್ಕಾಗಿ ತಾನು ಧರಿಸಿದ ಬಟ್ಟೆಯಲ್ಲಿಯೇ ಓಡಬೇಕಾಯಿತು! ಶರಣಾಗತಿಯಾದದ್ದು ಅಬ್ರಹಾಮನು ಎಂಬುದನ್ನು ಜ್ಞಾಪಿಸಿಕೊಳ್ಳಬೇಕು.

ಆದ್ದರಿಂದ ವಿಷಯಗಳು ಹೋದರೆ ಹೋಗಲಿ ಅನ್ನಲೂ ನಾವು ಕಲಿಯುವುದು ಅಗತ್ಯವಾಗಿದೆ. ಉದಾಹರಣೆಗೆ, ಒಂದು ಕುಟುಂಬ-ಒಡೆತನದ ಅಪಾರ್ಟ್‌ಮೆಂಟ್‌ನ ಮೇಲೆ ವಿವಾದಗಳಿದ್ದರೆ ಮತ್ತು ನಿಮ್ಮ ಭಾಗಕ್ಕಿಂತ  ಕಡಿಮೆಯಾಗಿ ನಿಮಗೆ ಕೊಡಲ್ಪಟ್ಟರೆ, ಸುಮ್ಮನೇ ಒಪ್ಪಿಕೊಂಡು ಕೊಡಲ್ಪಟ್ಟದನ್ನು ಅಂಗೀಕರಿಸಿಕೊಳ್ಳಿರಿ. ಇಲ್ಲವೇ ಮೊಂಡುತನವುಳ್ಳವರಾಗಿ ಜಗಳವಾಡುತ್ತೀರಿ ಮತ್ತು ಸರಿಯಾದ ಆಸ್ತಿಯ ಹಂಚಿಕೆಯನ್ನು ಪಡೆದುಕೊಳ್ಳಲೂ ನಿಮ್ಮ 'ಸ್ನೇಹಿತನಂತೆ ಜಗಳವಾಡುತ್ತೀರ ಅಥವಾ ಶರಣಾಗುವುದರಿಂದ ಜಗಳವು ನಿಮ್ಮ ಬಾಗಿಲಿನಿಂದ ದೂರವಾಗಿರಲೂ ಬಯಸುತ್ತೀರ! ಇದನ್ನು ಮಾಡುವುದರಿಂದ ನಿಮ್ಮ ಜೀವಿತಗಳಿಗೆ ದೇವರ ಆಶೀರ್ವಾದವು ಬರುತ್ತವೆ.

ನಾವು ಜಗಳದೊಡನೆ ಸ್ನೇಹ ಬೆಳೆಸುವಾಗ ಪರಲೋಕವು ಮುಚ್ಚಲ್ಪಡುತ್ತದೆ. ಅಲ್ಲಿ ಆಶೀರ್ವಾದವಿರುವುದಿಲ್ಲ ಬದಲಿಗೆ ನಾವು ಜಗಳವನ್ನು ಬಾಗಿಲಿನಿಂದ ದೂರವಿರಿಸಿದರೆ, ದೇವರು ನಿಜವಾಗಿಯು ಆತನ ಆಶೀರ್ವಾದಗಳನ್ನು ಸುರಿಸುತ್ತಾನೆ. ಇದು ಅಬ್ರಹಾಮನಿಗೆ ಜರುಗಿತ್ತು. ಲೋಟನು ಬಿಟ್ಟಿ ಹೋದ ದಿನವೇ ಎಲ್ಲವೂ ನಿನ್ನದೇ ಎಂಬುದಾಗಿ ಅಬ್ರಹಾಮನಿಗೆ ದೇವರು ಹೇಳಿದನು ಮತ್ತು ದೇವರು

ಅವನ ಸ್ನೇಹಿತನಾಗಿದ್ದನು ಮತ್ತು ಎಲ್ಲಾ ವಿಷಯಗಳಲ್ಲಿಯ ಆತನು ಅವನ ಸಂಗಡ ಇದ್ದನು. ಅಬ್ರಹಾಮನಿಗೆ ಸಾಧಾರಣವಾಗಿ ಕಾಣಿಸಿದವೆಲ್ಲವುಗಳನ್ನು ದೇವರು ಅಸಂಖ್ಯಗೊಳಿಸಿದನು ಮತ್ತು ಅದನ್ನು ದೊಡ್ಡದಾದ ಆಶೀರ್ವಾದವಾಗಿ ತಿರುಗಿಸಿದನು. ಲೋಟನು ದೇಶದ ಒಂದು ಭಾಗವನ್ನು ಸಾಮಾನ್ಯವಾಗಿ ನೋಡಿದಾಗ ಅದನ್ನು 'ಅಪಮೌಲ್ಯವೆಂದು' ನೋಡಿ ನೀರಾವರಿಯ ಫಲವತ್ತಾದದ್ದನ್ನು ಆರಿಸಿಕೊಂಡನು. ಅಧಿಕವಾಗಿ ಮೌಲ್ಯವಿಲ್ಲದ್ದನ್ನು ಅಬ್ರಹಾಮನು ಹೊಂದಲಿ ಎಂಬುದಾಗಿ ಲೋಟನು ಬಯಸಿದನು! ಆದರೆ ದೇವರು ಅಬ್ರಹಾಮನ ಸಂಗಡ ಇದ್ದನು. ಆದ್ದರಿಂದ ಜಗಳವನ್ನು ದೂರವಿಡುವ ಏಕೈಕ ಉದ್ದೇಶದಿಂದ ಶರಣಾಗಲೂ ಕಲಿಯುವುದು ಅವಶ್ಯಕ ಮತ್ತು ನಾವು ದೇವರ ಆಶೀರ್ವಾದ ನೋಡುತ್ತೇವೆ.

## ಸೌಮ್ಯತೆ ದೌರ್ಬಲ್ಯವಲ್ಲ

ಕೀರ್ತನೆಗಳು 37:11

**ಆದರೆ ದೀನರು ದೇಶವನ್ನು ಅನುಭವಿಸುವರು ಅವರು ಮಹಾಸೌಖ್ಯದಿಂದ ಆನಂದಿಸುವರು.**

ಸೌಮ್ಯತೆಯು ವೇಷಾಂತರದಲ್ಲಿ ನಿಜವಾಗಿ ಬಲವಾಗಿದೆ. ದೀನರು ದೇಶವನು ಅನುಭವಿಸುವರು ಎಂಬುದಾಗಿ ಸತ್ಯವೇದ ಹೇಳುತ್ತದೆ. ಒಂದು ಭಾನುವಾರದ ಸುದ್ದಿ ಪತ್ರಿಕೆಗಳು ದೀನರು ದೇಶವನ್ನು ಅನುಭವಿಸುವುದಿಲ್ಲ ಎಂಬ ಒಂದು ಲೇಖನ ಹೊಂದಿತ್ತು. ಆದರೆ ದೀನರು ದೇಶವನ್ನು ಅನುಭವಿಸುವರು ಎಂಬುದಾಗಿ ಸತ್ಯವೇದವು ಇನ್ನೂ ಎತ್ತಿ ಹಿಡಿಯುತ್ತದೆ. ಇದು ಜರುಗುವುದನ್ನು ನೋಡಲೂ ಜನರು ಸಾಕಾಗುವಷ್ಟು ಅದರೊಡನೆ ಜೀವಿಸದೇ ಇರಬಹುದು. ದೇವರು ಎಂದಿಗೂ ವಿಫಲನಾಗುವುದಿಲ್ಲ ಮತ್ತು ಆತನ ವಾಕ್ಯವು ಸತ್ಯವಾದವು. ದೀನರು ದೇಶವನ್ನು ಬಾಧ್ಯವಾಗಿ ಹೊಂದುವರು.

## ಶೀಘ್ರವಾಗಿ ಸಮಾಧಾನ ಪಡಿಸಿಕೊಳ್ಳಿರಿ

ಮತ್ತಾಯ 5:9,25,26

**ಸಮಾಧಾನಪಡಿಸುವವರು ಧನ್ಯರು ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು. ನಿನ್ನ ವಾದಿಯ ಸಂಗಡ ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ ಸಮಾಧಾನ ಮಾಡಿಕೋ ಇಲ್ಲದಿದ್ದರೆ ವಾದಿಯು ನಿನ್ನನ್ನು ನ್ಯಾಯಾಧಿಪತಿಗೆ ಒಪ್ಪಿಸಾನು ನ್ಯಾಯಾಧಿಪತಿಯು ನಿನ್ನನ್ನು ಓಲೇಕಾರನ ಕೈಗೆ ಒಪ್ಪಿಸಿಕೊಟ್ಟಾನು. ಆಗ ನೀನು ಸೆರೆಯಲ್ಲಿ**

**ಬಿದ್ದೀಯೆ. ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ.**

ಇಬ್ರಿಯರಿಗೆ 12:14

**ಎಲ್ಲರ ಸಂಗಡ ಸಮಾಧಾನದಿಂದಿರುವುದಕ್ಕೂ ಪರಿಶುದ್ಧತೆಯನ್ನು ಹೊಂದುವುದಕ್ಕೊ ಪ್ರಯತ್ನ ಮಾಡಿರಿ ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ**

ರೋಮಾಪುರದವರಿಗೆ 12:18

**ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ.**

ನ್ಯಾಯಾಧಿಪತಿಗೆ ತೆಗೆದುಕೊಂಡು ಹೋಗಿ ದಂಡನೆ ರವಾನಿಸುವ ಮೊದಲೇ ತಕ್ಷಣವೇ ನಮ್ಮ ವಾದಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕೆಂಬುದಾಗಿ ಯೇಸು ಉಪದೇಶಿದಿದ್ದಾನೆ. ನಾವು ಯಾವಾಗಲೂ ಸಮಾಧಾನ ಪಡಿಸುವವರಾಗಿರಬೇಕು, ಶರಣಾಗತರಾಗಿರಬೇಕು ಅಥವಾ ಹೋಗಲಿ ಎಂಬುದಾಗಿ ಬಿಟ್ಟು ಬಿಡುವವರಾಗಿರಬೇಕು. ನಮ್ಮ ಉದ್ದೇಶವು ಜಗಳವನ್ನು ದೂರವಿರಿಸುವುದಾಗಿದ್ದರೆ ಮತ್ತು ಅದಕ್ಕೆ ಶರಹಾಗತರಾಗಿ ಅದನ್ನು ಮಾಡುತ್ತಿದ್ದರೆ, ನಮ್ಮ ಜೀವಿತದಲ್ಲಿ ದೇವರ ಆಶೀರ್ವಾದಗಳು ನಿಶ್ಚಯವಾಗಿ ಹಿಂಬಾಲಿಸುತ್ತವೆ. ನಾವು ಶರಣಾಗತಿಯಿಂದ ಕಳೆದುಕೊಂಡಿದ್ದರೆ, ಆತನ ಆಶೀರ್ವಾದ ಮೂಲಕವಾಗಿ ದೇವರು ಅದನ್ನು ಅನೀಕ ಸಮಯಗಳಲ್ಲಿ ನೀಡುತ್ತಾನೆ.

## ತಪ್ಪುಗಳ ಲೆಕ್ಕವನ್ನಿಡಬೇಡಿರಿ

ಜನರು ಮಾಡಿದಂತಹ ತಪ್ಪುಗಳ ಲೆಕ್ಕವನ್ನಿಟ್ಟುಕೊಳ್ಳಬೇಡಿರಿ. ಉದಾಹರಣೆ ನೀವು ಯಾರಾದರೂ ಒಬ್ಬರೊಂದಿಗೆ ಸಾಮಾನ್ಯವಾಗಿ ಮಾತಾಡುವಾಗ, ಇದ್ದಕ್ಕಿದ್ದಂತೆ 25 ವರ್ಷಗಳ ಹಿಂದೆ ನೀವು ಅವನಿಗೆ ಮಾಡಿದ್ದ ಕೆಲವು ತಪ್ಪುಗಳನ್ನು ಹೇಳಿ ಆರೋಪಿಸಬಹುದು. ನೀವು ಬಹಳ ಹಿಂದೆಯೇ ಮರೆತು ಬಿಟ್ಟಿದ್ದೀರಿ ಆದರೆ ಅವನು ಮರೆತಿಲ್ಲ. ಅವನು ತಪ್ಪು ನಡೆದ ದಿನವನ್ನು ಮಾತ್ರವೇ ನೆನೆಸಿಕೊಳ್ಳುವುದಲ್ಲದೇ ಅಂದಿನ ಸಮಯ ಮತ್ತು ನಿಮ್ಮ ಕುರಿತು ಆ ದಿನದ ಎಲ್ಲವನ್ನು ನೆನೆಸಿಕೊಳ್ಳುತ್ತಾನೆ.

ಪ್ರೀತಿಯು ''ಮರ್ಯಾದೆಗೆಟ್ಟು ನಡೆಯುವುದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವುದಿಲ್ಲ ಸಿಟ್ಟುಗೊಳ್ಳುವುದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ'' (1 ಕೊರಿಂಥದವರಿಗೆ 13:5) ಎಂಬುದಾಗಿ ಸತ್ಯವೇದ ಹೇಳುತ್ತದೆ. ಪ್ರೀತಿಯು ಕೆಟ್ಟದ್ದನ್ನು ಲೆಕ್ಕಿಸುವುದಿಲ್ಲ ಇಲ್ಲವೇ ಇತರರ ಪಾಪಗಳ

ಲೆಕ್ಕವನ್ನು ಇಟ್ಟುಕೊಳ್ಳುವುದಿಲ್ಲ. ಆದ್ದರಿಂದ ಜಗಳ-ರಹಿತವಾದ ಜೀವಿತವನ್ನು ಜೀವಿಸಲು ಬಯಸಿದರೆ ಇತರೆ ಜನರುಗಳ ಕಪ್ಪು ಹಲಗೆಯನ್ನು ಪ್ರತಿದಿನ ನಾವು ಸ್ವಚ್ಛವಾಗಿಡುವುದನ್ನು ಕಲಿಯಬೇಕು! ಅವರು ನಮಗೆ ವಿರುದ್ಧವಾಗಿ ಮಾಡಿದ್ದರ ಲೆಕ್ಕಗಳನ್ನು ಇಡಬಾರದು! ನಮ್ಮ ಜೀವಿತದಿಂದ ಜಗಳಗಳನ್ನು ಇದು ದೂರವಿರಿಸುತ್ತದೆ.

ಜ್ಞಾನೋಕ್ತಿಗಳು 17:9

**ದೋಷವನ್ನು ಮುಚ್ಚಿಡುವವನು ಪ್ರೇಮವನ್ನು ಸೆಳೆಯುವನು ಎತ್ತಿ ಆಡುತ್ತಿರುವವನು ಸ್ನೇಹವನ್ನು ಕಳೆದುಕೊಳ್ಳುವನು.**

## ಉದಾರವಾಗಿ ಕ್ಷಮಿಸಿರಿ ಮತ್ತು ಶೀಘ್ರವೇ ಕ್ಷಮಿಸಿರಿ

ಮತ್ತಾಯ 5:23,24

**ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬುದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟು ಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು ಆ ಮೇಲೆ ಒಂದು ನಿನ್ನ ಕಾಣಿಕೆಯನ್ನು ಕೊಂಡು.**

ಹಳೆಯ ವಿಚಾರಗಳನ್ನು ಪುನಃ ನೆನೆಸುವಾಗ ಸ್ನೇಹವನ್ನು ನಾಶಪಡಿಸುತ್ತೇವೆ ಮತ್ತು ಕಳೆದುಕೊಳ್ಳುತ್ತೇವೆ. ಹಳೆಯದನ್ನು ಮರೆಯಬೇಕು ಮತ್ತು ಅದು ಹೋಗಲೂ ಬಿಡಬೇಕು ಇಲ್ಲವಾದರೆ ನಾವು ಸ್ನೇಹವನ್ನು ನಾಶಪಡಿಸುತ್ತೇವೆ. ನಾವು ದೋಷವನ್ನು ಮುಚ್ಚಿಕೊಂಡರೇ ಪ್ರೀತಿಯನ್ನು ಸೆಳೆಯುವರಾಗಿರುತ್ತೇವೆ. ನಾವು ಬೇಗನೇ ಕ್ಷಮಿಸಬೇಕು ಮತ್ತು ಧಾರಾಳವಾಗಿ ಕ್ಷಮಿಸಬೇಕು ನಾವು ದೇವರ ಬಳಿಗೆ ಪ್ರಾರ್ಥನೆಯಲ್ಲಿ ಹೋಗುವಾಗ ನಮಗೆ ವಿರುದ್ಧವಾಗಿ ಯಾರೋ ತಪ್ಪು ಮಾಡಿದ್ದಾರೆಂದು ನೆನಪಿಗೆ ಬಂದರೆ, ನಾವು ಪ್ರಾರ್ಥಿಸುವುದಕ್ಕೆ ಮೊದಲೇ ಅದನ್ನು ಸರಿಪಡಿಸಬೇಕೆಂಬುದಾಗಿ ಯೇಸುವು ಹೇಳಿದ್ದಾರೆ. ಆದ್ದರಿಂದ ಆ ವಿಚಾರವನ್ನು ಸರಿಪಡಿಸಿದಾಗ, ಅದು ಜರುಗಿದಾಗ ನಾವು ಯಾವುದೇ ಸಮಯದಲ್ಲಿ ಪ್ರಾರ್ಥಿಸಬಹುದು. ತಕ್ಷಣವೇ ಕ್ಷಮಿಸುವ ಬದಲಿಗೆ ಅದರ ಒಂದು ಉದ್ದವಾದ ಲೆಕ್ಕ ಇಟ್ಟುಕೊಂಡು ಅದರಿಂದ ಏನಾದರೂ ಮಾಡಲೂ ಓಡಾಡುತ್ತಿದ್ದರೆ ನಾವು ಪ್ರಾರ್ಥನೆ ಪ್ರಾರಂಭಿಸುವುದಕ್ಕೆ ಮೊದಲು ಕ್ಷಮಾಪಣೆಯನ್ನು ಹುಡುಕು ಎಂಬುದು ಇದರ ಅರ್ಥವಾಗಿದೆ. ದೋಷವು ಕಾಣಿಸಿಕೊಂಡಾಗ ಕ್ಷಮಾಪಣೆಯನ್ನು ಬಿಡುಗಡೆಗೊಳಿಸಬೇಕು, ಅದನ್ನು ಮರೆಯಬೇಕು ಅದನ್ನು ಇತ್ಯರ್ಥಗೊಳಿಸಬೇಕು,

ಪ್ರಕರಣ ಮುಗಿಸಬೇಕು-ಕಪ್ಪು ಹಲಗೆಯನ್ನು ಶುದ್ಧವಾಗಿ ಒರೆಸಬೇಕು! ಆಮೇಲೆ ನಾವು ಯಾವುದೇ ಸಮಯದಲ್ಲಿ ಪ್ರಾರ್ಥಿಸಲೂ ಸಿದ್ಧವಾಗಬಹುದು. ಯೇಸುವಿನ ಬಳಿಗೆ ಪೇತ್ರನು ಈ ರೀತಿಯಾಗಿ ಕೇಳುತ್ತಾ ಬಂದಾಗ: ''ಆಗ ಪೇತ್ರನು ಆತನ ಬಳಿಗೆ ಬಂದು-ಸ್ವಾಮೀ ನನ್ನ ಸಹೋದರನು ನನಗೆ ತಪ್ಪು ಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೇ ಎಂದು ಕೇಳಲು ಯೇಸು ಅವನಿಗೆ ಏಳು ಸಾರಿ ಎಂದಲ್ಲ ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ'' (ಮತ್ತಾಯ 18:21,22) ಎಂದು ಹೇಳಿದನು.

ಬಹುಶಃ ಯೇಸುವಿನ ಪ್ರಿಯನಾದ ಶಿಷ್ಯನಾದ ಯೋಹಾನನು ಪೇತ್ರನಿಗೆ ಬಹಳವಾಗಿ ತೊಂದರೆ ನೀಡುತ್ತಿದ್ದನು ಮತ್ತು ಪೇತ್ರನು ಅದನ್ನು ನಿಭಾಯಿಸಲೂ ಸಾಧ್ಯವಾಗಿರಲಿಲ್ಲ ಆದ್ದರಿಂದ ಅದರ ಕುರಿತು ಯೇಸುವಿನೊಂದಿಗೆ ಚರ್ಚಿಸಲೂ ತೀರ್ಮಾನಿಸಿದ್ದನು. ತಪ್ಪು ಮಾಡಿದವನ ಹೆಸರನ್ನು ಹೇಳದೇ ಬಹುಶಃ ಯಾರನ್ನಾದರೂ ಎಷ್ಟು ಸಾರಿ ಕ್ಷಮಿಸಬೇಕೆಂಬುದಾಗಿ ಯೇಸುವನ್ನು ಕೇಳಿದನು. ಏನು ಜರುಗುತ್ತಿದೆ ಎಂಬುದು ಯೇಸುವಿಗೆ ಗೊತ್ತಿತ್ತು. ಆದ್ದರಿಂದ ಏಳು ಸಾರಿ ಕ್ಷಮಿಸಬೇಕಾ ಎಂಬುದಾಗಿ ಪೇತ್ರನು ಕೇಳಿದಾಗ, ''ಏಳೆಪ್ಪತ್ತು ಸಾರಿ'' ಎಂಬುದಾಗಿ ಯೇಸು ಉತ್ತರಿಸಿದನು. ಇನ್ನೊಂದು ಪದದಲ್ಲಿ, ಯೇಸುವು ಪೇತ್ರನಿಗೆ ಕ್ಷಮಿಸುವುದರಲ್ಲಿ ಧಾರಳವಾಗಿರು ಮತ್ತು ಕ್ಷಮಿಸುತ್ತಲೇ ಇರು ಎಂಬುದಾಗಿ ಹೇಳಿದನು. ನಾವು ಸಹ ತಪ್ಪುಗಳ ಲೆಕ್ಕವನ್ನಿಡಬಾರದು ಮತ್ತು ನಾವು ಅದನ್ನು ಮಾಡಿದರೆ ಜನರೊಂದಿಗೆ ಜಗಳವಾಡಲೂ ಯಾವುದೇ ಕಾರಣವಿರುವುದಿಲ್ಲ ಎಲ್ಲವನ್ನು ಕ್ಷಮಿಸಲಾಗಿದೆ!

## ದುರಾತ್ಮನ ಕಾರ್ಯತಂತ್ರ ಬಂಧಿಸಿರಿ

ಎಫೆಸದವರಿಗೆ 6:12

**ನಾವು ಹೋರಾಡುವುದು ಮನುಷ್ಯ ಮಾತ್ರದವರ ಸಂಗಡವಲ್ಲ ರಾಜತ್ವಗಳ ಮೇಲೆಯೂ ಅಧಿಕಾರಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶ ಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.**

ಜಗಳ ಮತ್ತು ಗೊಂದಲವು ದುರಾತ್ಮನ ಕಾರ್ಯ ವೈಖರಿಯಿಂದ ಉಂಟಾಗುತ್ತವೆ. ಅನೇಕ ಸಮಯಗಳಲ್ಲಿ ನಮ್ಮ ಜೀವಿತದಲ್ಲಿನ ಜಗಳಗಳಿಗೆ ನಾವು ಜವಾಬ್ದಾರಿಯಾಗಿರುತ್ತೇವೆ. ನಮ್ಮ ಸಂಬಂಧದಲ್ಲಿ ಜಗಳ ಮತ್ತು ಗೊಂದಲಗಳು ಅನೇಕ ಸಮಯಗಳಲ್ಲಿ ದುರಾತ್ಮನು ತಂದು ಹಾಕಲೂ ಪ್ರಯತ್ನಿಸುವುದರಿಂದ ನೇರವಾಗಿ ನಮ್ಮ

ಸಂಬಂಧಗಳಲ್ಲಿ ಉಂಟಾಗಲೂ ಕಾರಣಗಳಾಗಿರುತ್ತವೆ! ನಾವು ಯಾವುದೇ ತಪ್ಪುಗಳನ್ನು ಮಾಡಿರುವುದಿಲ್ಲ ಮತ್ತು ಇತರರು ಯಾವುದೇ ತಪ್ಪು ಮಾಡಿರುವುದಿಲ್ಲ ಆದರೆ ನಮ್ಮ ಸಂಬಂಧದಲ್ಲಿ ಯಾವುದೋ ತಪ್ಪು ಜರುಗುತ್ತಿರುವಂತೆ ನಮಗೆ ಕಾಣಿಸುತ್ತದೆ! ಅದು ಜರುಗುವಂತಹ ರೀತಿಯಲ್ಲಿ ವಿಷಯಗಳು ನಡೆಯುತ್ತಿರುವುದಿಲ್ಲ! ಈ ಪ್ರಕರಣದಲ್ಲಿ ಆ ಒಂದು ಸಂಬಂಧವನ್ನು ದುರಾತ್ಮನು ನಾಶಮಾಡಲೂ ಪ್ರಯತ್ನಿಸಿರುತ್ತಾನೆ. ಜಗಳದ ಆತ್ಮನು ಒಳಗೆ ಬರುತ್ತಾನೆ, ಆ ಒಂದು ಸಂಬಂಧವನ್ನು ಮುರಿಯುವ ಕೆಲಸ ಮಾಡುತ್ತಾನೆ! ಇಲ್ಲಿ ದೇವರು ಕೊಟ್ಟಂತಹ ಅಧಿಕಾರದೊಡನೆ ನಾವು ನಿಂತುಕೊಳ್ಳುವುದು ಅವಶ್ಯಕ ಮತ್ತು ಆತ್ಮನ ಕತ್ತಿಯನ್ನು ಉಪಯೋಗಿಸಬೇಕು! ನಾವು ದೇವರ ವಾಕ್ಯ ಮಾತಾಡಬೇಕು ಮತ್ತು ಸಂಬಂಧದಲ್ಲಿ ಸಮಾಧಾನ ಘೋಷಿಸಬೇಕು – ನೀತಿವಂತಿಕೆ, ಸಮಾಧಾನ ಮತ್ತು ಸಂತೋಷವಿರುವ ದೇವರ ರಾಜ್ಯದ ಒಂದು ಸಂಬಂಧ ಅದು ಎಂಬುದಾಗಿ ಘೋಷಿಸಬೇಕು. ''ನಮ್ಮ ಯಾವುದೇ ಸಂಬಂಧದಲ್ಲಿ ಜಗಳ ಅಥವಾ ವಿಭಾಗಗಳು ಬರುವುದನ್ನು ನಾವು ಸಹಿಸಿಕೊಳ್ಳುವುದಿಲ್ಲ'' ಎಂಬುದಾಗಿ ಯಾವಾಗಲೂ ಹೇಳಬೇಕು. ನಾವು ದೇವರಿಂದ ಕೊಡಲ್ಪಟ್ಟ ಅಧಿಕಾರವನ್ನು ತೆಗೆದುಕೊಳ್ಳಬೇಕು ಮತ್ತು ನಮ್ಮ ಸಂಬಂಧದಿಂದ ಜಗಳದ ಆತ್ಮನನ್ನು ದೂರವಿರಿಸಬೇಕು! ಸಮಾಧಾನವನ್ನು ಪಾಲಿಸಲೂ ಇದನ್ನು ನಾವು ಮಾಡುವುದು ಅವಶ್ಯಕ!

## ಸವಾಲುಗಳು

### ವ್ಯಕ್ತಿಗಳಾಗಿ

ರೋಮಾಪುರದವರಿಗೆ 13:12–14

**ಇರುಳು ಬಹಳ ಮಟ್ಟಿಗೆ ಕಳೆಯಿತು ಹಗಲು ಸಮೀಪವಾಯಿತು ಕತ್ತಲೆಗೆ ಅನುಗುಣವಾದ ಕೃತ್ಯಗಳನ್ನು ಬಿಟ್ಟು ಬೆಳಕಿಗೆ ಅನುಗುಣವಾದ ಆಯುಧಗಳನ್ನು ಧರಿಸಿಕೊಳ್ಳೋಣ ದುಂದೌತಣ ಕುಡಿಕತನಗಳಲ್ಲಿಯಾಗಲಿ ಕಾಮವಿಲಾಸ ನಿರ್ಲಜ್ಜಾ ಕೃತ್ಯಗಳಲ್ಲಿಯಾಗಲಿ ಜಗಳ ಹೊಟ್ಟೆ ಕಿಚ್ಚುಗಳಲ್ಲಿಯಾಗಲಿ ಕಾಲ ಕಳೆಯದೆ ಹಗಲು ಹೊತ್ತಿಗೆ ತಕ್ಕ ಹಾಗೆ ಮಾನಸ್ಥರಾಗಿ ನಡೆದುಕೊಳ್ಳೋಣ. ದೇಹದ ಆಶೆಗಳನ್ನು ಪೂರೈಸುವುದಕ್ಕಾಗಿ ಚಿಂತಿಸದೆ ಕರ್ತನಾದ ಯೇಸುಕ್ರಿಸ್ತನನ್ನು ಧರಿಸಿಕೊಳ್ಳಿರಿ.**

ವ್ಯಕ್ತಿಗಳಾಗಿ, ನಮ್ಮ ಜೀವಿತದಿಂದ ಜಗಳಗಳನ್ನು ಹೊರಗಿಡಲೂ ಕರೆಯಲ್ಪಟ್ಟಿದ್ದೇವೆ. ದಿನವು ಹತ್ತಿರದಲ್ಲಿದೆ! ಆದುದರಿಂದ ಅಂಧಕಾರದ ಕ್ರಿಯೆಗಳನ್ನು

ತೊಡೆದು ಹಾಕೋಣ ಮತ್ತು ಬೆಳಕಿನ ರಕ್ಷಾಕವಚ ಧರಿಸಿಕೊಳ್ಳೋಣ ಅದನ್ನು ಹೇಗೆ ಮಾಡಬಹುದು? ನಾವು ಸೌಮ್ಯತೆಯಲ್ಲಿ ನಡೆಯಬೇಕೆಂದು ದೇವರ ವಾಕ್ಯ ಹೇಳುತ್ತದೆ. ಸೌಮ್ಯತೆಯಲ್ಲಿ ನಡೆಯುವುದು ಅಂದರೇನು? ನಾವು ಹಗಲಿನ ಸಮಯದಲ್ಲಿ ನಡೆಯುವವರಂತೆ ನಡೆಯಬೇಕು, ಜಗಳ, ಎಲ್ಲ ಬಗೆಯ ಅಂಧಕಾರದ ಕ್ರಿಯೆಗಳಿಂದ ದೂರವಿರಬೇಕು. ನಾವು ಹಗಲಿನ ಜನರಾಗಿದ್ದೇವೆ ಕತ್ತಲೆಯ ಜನರಲ್ಲ! ಯೇಸುವಿನಲ್ಲಿ ಕೇಂದ್ರಿಕರಿಸಲ್ಪಟ್ಟವರಾಗಿರಬೇಕು ಮತ್ತು ಸೌಮ್ಯತೆಯಲ್ಲಿ ನಡೆಯುವರಾಗಿರಬೇಕು! ನಾವೆಲ್ಲರೂ ಜಗಳವಿಲ್ಲದ ಜೀವನವನ್ನು ಜೀವಿಸಲು ಆಯ್ಕೆ ಮಾಡಬಹುದು. ನಮ್ಮ ಸ್ನೇಹಿತರು, ನೆರೆಹೊರೆಯವರು ಮತ್ತು ನಾವು ಜೀವನ ಮಾಡುವವರೊಡನೆ ಜಗಳಕ್ಕಾಗಿ ಅನೇಕ ಅವಕಾಶಗಳಿರಬಹುದು! ಉದಾಹರಣೆಗೆ, ನಮ್ಮ ಅಪಾರ್ಟ್‌ಮೆಂಟ್‌ನಲ್ಲಿ ನಮ್ಮ ನೆರೆಹೊರೆಯವರು ಅವರ ಸಂಗೀತವನ್ನು ಜೋರಾಗಿ ಹಾಕಿದಾಗ, ನಾವು ಸಹ ನಮ್ಮ ಸಂಗೀತವನ್ನು ಜೋರಾಗಿ ಹಾಕುವುದರಿಂದ ಪ್ರತಿಕ್ರಿಯಿಸಬಹುದು. ಅದಕ್ಕೆ ಬದಲಾಗಿ ಜಗಳವನ್ನು ಉಂಟುಮಾಡದಂತಹ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಬೇಕು.

ನಮ್ಮೆಲ್ಲರಿಗೂ ಇದು ಒಂದು ಸವಾಲಾಗಿದೆ! ''ಏನು ಜರುಗುತ್ತದೆಂದು ಅಪ್ರಸ್ತುತವಾಗಿದ್ದರೂ, ಇತರೆ ಜನರು ಏನು ಹೇಳುತ್ತಾರೆ ಮತ್ತು ಮಾಡುತ್ತಾರೆ, ನಮ್ಮ ಜೀವಿತದಲ್ಲಿ ಜಗಳಕ್ಕೆ ಎಷ್ಟೇ ಅವಕಾಶಗಳು ಬಂದರು ನಾವು ಜಗಳವಿಲ್ಲದೇ ಜೀವನ ಜೀವಿಸುತ್ತೇವೆ ಎಂಬುದಾಗಿ'' ನಮಗೆ ನಾವೇ ಹೇಳಿಕೊಳ್ಳುತ್ತಿರಬೇಕು.

## ದೇಹವಾಗಿ

ಕೀರ್ತನೆಗಳು 133:1-3

**ಆಹಾ! ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು ಎಷ್ಟೋ ರಮ್ಯವಾದದ್ದು! ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದು ಬರುವ ಶ್ರೇಷ್ಟ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.**

ನಮ್ಮ ಸಭೆಗಳಲ್ಲಿಯು ಜಗಳಗಳಿರಬಾರದು. ಜಗಳವು ಶೂನ್ಯವಾಗಿರುವ ಕಡೆ ದೇವರ ಅಭಿಷೇಕವನ್ನು ಮತ್ತು ನವಚೈತನ್ಯವನ್ನು ಅನುಭವಿಸುತ್ತೇವೆ. ಅಲ್ಲಿ ಇಬ್ಬನಿಯು ಜೀವವೂ, ಆಶೀರ್ವಾದವೂ ಮತ್ತು ಸಮಾಧಾನವೂ ಇರುತ್ತದೆ. ಅಂತಹ ರೀತಿಯಲ್ಲಿ ಸಭೆಯನ್ನು ಹೊಂದಿರುವಂತದ್ದು ನಮ್ಮ ಮೇಲಿದೆ! ಪ್ರತಿಯೊಬ್ಬರು

ಪ್ರೀತಿಯಲ್ಲಿ ಸಮಾಧಾನದಲ್ಲಿ ಮತ್ತು ಸಹಬಾಳ್ವೆಯ ನಡೆಯುವಂತಹ ಯಾವುದೇ ಜಗಳಗಳಿಲ್ಲದಂತಹ ಒಂದು ದೇಹವು ನಾವಾಗಿರಬೇಕು. ನಮ್ಮ ಜೀವಿತದಿಂದ ಜಗಳಗಳನ್ನು ದೂರವಿರಿಸುವುದರ ಪ್ರಾಮುಖ್ಯತೆಯನ್ನು ಪ್ರತಿಯೊಬ್ಬರು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಸಮಸ್ಯೆಗಳು ಉದ್ಭವಿಸಿದರೂ, ತಕ್ಷಣವಾಗಿ ಅದನ್ನು ಪುನಾರವರ್ತಿಸಬಾರದು. ಉತ್ತಮ ವಿಷಯಗಳಾದಂತಹ ಯಶಸ್ಸುಗಳು, ಸಾಧಿಸಲ್ಪಟ್ಟಂತಹ ಸಂಗತಿಗಳ ಕುರಿತು ಮಾತ್ರವೇ ದಾಖಲಿಸಿರಿ. ಸೋಲುಗಳು ಮತ್ತು ನಕಾರಾತ್ಮಕವಾದವುಗಳನ್ನು ಮರೆತುಬಿಡಿರಿ. ಜನರ ತಪ್ಪುಗಳನ್ನು ಮರೆತುಬಿಡಿರಿ ಮತ್ತು ಅಂತಹ ತಪ್ಪುಗಳು ಅಳಿಸಿ ಹಾಕಲ್ಪಡಲಿ ಯಾಕೆಂದರೆ ನಮ್ಮ ಪಾಪಗಳನ್ನು ಸಮುದ್ರದ ಆಳದವರೆಗೂ ದೇವರು ಎಸೆದು ಬಿಡುತ್ತಾನೆ ಮತ್ತು ಅವುಗಳನ್ನು ನೆನಪಿಗೆ ತರುವುದಿಲ್ಲ ಎಂಬುದಾಗಿ ಸತ್ಯವೇದವು ಹೇಳುತ್ತದೆ. ದೇವರ ನಮ್ಮ ಪಾಪಗಳನ್ನು ಜ್ಞಾಪಿಸಿಕೊಳ್ಳದಿದ್ದರೆ, ನಾವು ಏಕೆ ಅಂತಹ ವಿಷಯಗಳನ್ನು ನೆನಸಿಕೊಳ್ಳುವ ತೊಂದರೆ ತೆಗೆದುಕೊಳ್ಳುತ್ತೇವೆ? ನಮ್ಮ ಜ್ಞಾಪಕ ಜೀವಕೋಶಗಳನ್ನು ಸಕಾರಾತ್ಮಕವಾದವುಗಳಿಗೆ ಉಪಯೋಗಿಸೋಣ!

**ನಮ್ಮ ಪ್ರೇರಣೆಗಳು ಬಹಳ ಪ್ರಾಮುಖ್ಯವಾಗಿವೆ ತಪ್ಪು ಪ್ರೇರಣೆಗಳಿಂದ ತಪ್ಪು ವಿಷಯಗಳನ್ನು ನಾವು ಮಾಡುವಾಗ ನಮ್ಮ ಮಧ್ಯದಲ್ಲಿ ವ್ಯಾಜ್ಯಗಳು ಮತ್ತು ಕಾದಾಟಗಳಿರುತ್ತವೆ ಆದ್ದರಿಂದ ಯಾವಾಗಲೂ ನಮ್ಮ ಪ್ರೇರಣೆಗಳನ್ನು ಪರೀಕ್ಷಿಸುತ್ತಿರಬೇಕು ಮತ್ತು ಅವುಗಳನ್ನು ಸಂರಕ್ಷಣೆ ಮಾಡಬೇಕು. ಯಾರಾದರೂ ನಮಗೆ ಮಾಡಿದಂತಹ ಕ್ರಿಯೆಗಳ ನಿಮಿತ್ತವಾಗಿ ಜಗಳದಿಂದ ಪ್ರೇರಿತಗೊಂಡು ಅದನ್ನು ಹಿಂತಿರುಗಿಸಬೇಕೆಂಬುದಾಗಿ ನಮ್ಮ ಪ್ರೇರಣೆಯಾಗಿದ್ದರೆ ನಾವು ಅದನ್ನು ಮಾಡದೇ ಇರೋಣ.**

## ಪಶ್ಚಾತ್ತಾಪ ಮತ್ತು ಪ್ರಾರ್ಥನೆ

ನಮ್ಮಲ್ಲಿ ಅನೇಕರು ಜಗಳದಿಂದ ಪ್ರೇರಿತಗೊಂಡು ಕಾರ್ಯಗಳನ್ನು ಮಾಡುತ್ತಾರೆ! ಆದರೆ ನಾವು ಅದನ್ನು ಬದಲಾಯಿಸಬಹುದು! ಪ್ರಾರ್ಥಿಸಿ: ''ದೇವರೆ, ನಿಮ್ಮ ಪ್ರಸನ್ನತೆಯಲ್ಲ ನಾನು ನಿಂತಿರುವಾಗ, ನನ್ನ ಹೃದಯವನ್ನು ನನ್ನನ್ನು ತಗ್ಗಿಸಿಕೊಳ್ಳುತ್ತೇನೆ. ನಾನು ಮಾಡುತ್ತಿರುವಂತಹ ಅನೇಕ ಕ್ರಿಯೆಗಳು ಜಗಳದಿಂದ ಪ್ರೇರಿತಗೊಂಡಿವೆ ಎಂಬುದನ್ನು ನಾನು ಅರಿತುಕೊಳ್ಳುತ್ತೇನೆ! ಆದರೆ ಅದನ್ನು ನಾನು ಬದಲಾಯಿಸಲೂ ಬಯಸುತ್ತೇನೆ!''

ನಮ್ಮಲ್ಲಿ ಹಲವರು ಅವರ ಮಾತುಗಳಲ್ಲಿ ತುಂಬಾ ಸಡಿಲವಾಗಿರಬಹುದು– ಅರಿವಿಲ್ಲದೇ, ಹೇಳುವಂತಹ ವಿಷಯಗಳು ಸಾಮಾನ್ಯವಾಗಿ ಜನರಿಗೆ ನೋವುಂಟು ಮಾಡುತ್ತವೆ ಮತ್ತು ಆ ಕಾರಣದಿಂದಲೇ ನಾವು ಅನೇಕ ಸ್ನೇಹಿತರನ್ನು ಕಳೆದುಕೊಳ್ಳುತ್ತೇವೆ. ನಾವು ಪ್ರಾರ್ಥಿಸಬಹುದು: ''ದೇವರೆ, ನನ್ನ ಮಾತುಗಳೊಡನೆ ನಾನು ಅಧಿಕವಾಗಿ ಜಾಗರೂಕನಾಗಿರಲೂ ಬಯಸುತ್ತೇನೆ.''

ನಮ್ಮಲ್ಲಿ ಕೆಲವರು ತುಂಬಾ ಉರಿಗೊಳ್ಳುವ ಕೋಪ ಹೊಂದಿರಬಹುದು ಸುಲಭವಾಗಿ ಕೋಪಗೊಳ್ಳುತ್ತಾರೆ ಮತ್ತು ಹತೋಟಿ ಕಳೆದುಕೊಳ್ಳುತ್ತಾರೆ. ಆದರೆ ನಮ್ಮ ಕೋಪವನ್ನು ಹತೋಟಿಯಲ್ಲಿಟ್ಟುಕೊಂಡರೆ, ನಾವು ನಗರವನ್ನು ಆಳುವವನಿಗಿಂತ ಉತ್ತಮರಾದವರು ಎಂಬುದಾಗಿ ದೇವರ ವಾಕ್ಯ ಹೇಳುತ್ತದೆ. ಕರ್ತನನ್ನು ಕೇಳಿರಿ: ''ದೇವರೆ, ನನ್ನ ಕೋಪವನ್ನು ಪವಿತ್ರಾತ್ಮನ ಅಧೀನದಲ್ಲಿ ತರಲು ನನ್ನಗೆ ಕೃಪೆಯನ್ನು ಕೊಡು ಅವಮಾನಗಳನ್ನು ತಿರಸ್ಕರಿಸುವ ಸಾಮರ್ಥ್ಯವನ್ನು ಕೊಡು ಯಾಕೆಂದರೆ ನಾನು ನಕಾರಾತ್ಮಕವಾಗಿ ಪ್ರತಿಕ್ರಿಯಿಸದ ಹೊರತು ನಾನು ಏನಾಗಿದ್ದೆನೆಂಬುದನ್ನು ಇದು ಬದಲಾಯಿಸುವುದಿಲ್ಲ. ಯಾರಾದರೂ ಒರಟಾಗಿ ಮಾತಾಡುವಾಗ ಕರ್ತನೇ ಮೃಧುತ್ವದೊಡನೆ ಪ್ರತಿಕ್ರಿಯಿಸಲು ಕೃಪೆಯನ್ನು ನನಗೆ ಕೊಡು. ಶರಣಾಗತನಾಗಿರಲೂ ಮತ್ತು ಜಗಳಗಳಿಗೆ ಕಾರಣವಾದಂತಹ ವಿಷಯಗಳನ್ನು ಹಿಡಿದಿರುವಂತಹ ನನ್ನ ಮೊಂಡುತನವು ಹೊರಟು ಹೋಗು ಕೃಪೆ ಕೊಡು ನನ್ನ ಜೀವಿತವನ್ನು ಜಗಳವು ಬಿಟ್ಟು ಬಿಡುವಾಗ, ಆಶೀರ್ವಾದಗಳು ಬರುತ್ತವೆ. ದೇವರೆ! ಇಂತಹ ಬದಲಾವಣೆಯನ್ನು ನನ್ನ ಜೀವಿತದಲ್ಲಿ ತೆಗೆದುಕೊಂಡ ಬಾ ಆದ್ದರಿಂದ ನಾನು ಜಗಳ ರಹಿತವಾದ ಸಂಪೂರ್ಣ ಜೀವನ ಜೀವಿಸಬಹುದು.''

ಜನರು ನಮಗೆ ವಿರುದ್ಧವಾಗಿ ಮಾಡಿದ ತಪ್ಪುಗಳ ಲೆಕ್ಕಗಳನ್ನು ಇಡುವುದರಲ್ಲಿ ನಮ್ಮಲ್ಲಿ ಕೆಲವರು ಬಹಳ ಜ್ಞಾಪಕವುಳ್ಳವರಾಗಿರಬಹುದು. ದೇವರನ್ನು ಕೇಳಿರಿ: ''ಕರ್ತನೇ, ನನ್ನ ನೆನಪುಗಳನ್ನು ಅಳಿಸಿ ನಿರ್ಮಲಗೊಳಿಸು ಮಾತ್ತು ಇತರರು ನನಗೆ ಮಾಡಿದಂತಹ ತಪ್ಪುಗಳ ದಾಖಲೆಗಳು ನನ್ನಿಂದ ದೂರವಾಗಲೂ ಸಹಾಯ ಮಾಡು ಎಂಬುದಾಗಿ ಕೇಳಿಕೊಳ್ಳುತ್ತೇನೆ.''

ಗಂಡಂದಿರು ಮತ್ತು ಹೆಂಡತಿಯರು? ಪ್ರತಿಯೊಂದು ಮದುವೆಯಲ್ಲಿ ಜಗಳ ಮತ್ತು ಘರ್ಷಣೆಗಳಿಗೆ ಯಾವಾಗಲೂ ಅವಕಾಶವಿರುತ್ತದೆ. ದಿನದ ಕೊನೆಯಲ್ಲಿ ನಮ್ಮ ಸಂಗಾತಿಯ ಕಪ್ಪು ಹಲಗೆಯನ್ನು ಶುದ್ಧಿ ಮಾಡುತ್ತೇವೆ ಮತ್ತು ಜರುಗಿದ ತಪ್ಪುಗಳ ಲೆಕ್ಕವನ್ನಿಡುವುದಿಲ್ಲ ಎಂಬುದಾಗಿ ಹೇಳುವಂತದ್ದು ನಮ್ಮ ಮೇಲಿದೆ ಪ್ರಾರ್ಥಿಸಿರಿ: ''ದೇವರೆ, ನಮ್ಮಲ್ಲಿ ಕಾರ್ಯ ಮಾಡು ಮತ್ತು ನಮ್ಮ ಹೃದಯಗಳಲ್ಲಿ ಒಂದು ರೂಪಾಂತರ ತೆಗೆದುಕೊಂಡ ಬಾ.''

ಪಶ್ಚಾತ್ತಾಪ ಮತ್ತು ಪ್ರಾರ್ಥನೆಯ ಫಲಿತಾಂಶವಾಗಿ, ಸ್ವಸ್ಥತೆಯು ಮತ್ತು ದೀರ್ಘಕಾಲದವರೆಗೆ ಮುರಿದು ಹೋದ ಸಂಬಂಧಗಳನ್ನು ಸರಿಪಡಿಸುವುದಾಗಿದೆ.

ನಿಮ್ಮ ಹೃದಯಗಳಲ್ಲಿ ಮಾತ್ರವಲ್ಲದೆ, ನಿಮ್ಮ ಜೀವಿತದಲ್ಲಿನ ಎಲ್ಲಾ ಸಂಬಂಧಗಳಲ್ಲಿ ಸಮಾಧಾನ, ಸಹಬಾಳ್ವೆ ಮತ್ತು ಉತ್ತಮ ತಿಳುವಳಿಕೆ ಇರುತ್ತದೆ. ಅಂತಹ ಮುರಿದ ಎಲ್ಲಾ ಸಂಬಂಧಗಳಲ್ಲಿ ಪುನಃ ಕಟ್ಟುವಿಕೆ ತರಲೂ, ಸಮಾಧಾನ ಮತ್ತು ಸಂತೋಷ ತರಲೂ ದೇವರ ಕಾರ್ಯವು ಪ್ರಭಾವ ಬೀರಲಿ ಯಾಕೆಂದರೆ ನಮ್ಮ ಹೃದಯಗಳನ್ನು ದೇವರು ಬದಲಾಯಿಸಿದ್ದಾರೆ!

# ನೀವು ಹೊಂದಿಕೊಳ್ಳಲು ಮಾದರಿಗಳು

ಆಲ್ ಪೀಪಲ್ಸ್ ಸಭೆಯು ಉಚಿತವಾಗಿ ವಿದ್ಯುನ್ಮಾನ ಪ್ರತಿಗಳನ್ನು (ಮೈಕ್ರೋಸಾಫ್ಟ ಪದ ದಾಖಲೆಗಳನ್ನು) ಯಾವುದಾದರೂ ಅಥವಾ ನಾವು ಉಪಯೋಗಿಸುವಂತಹ ಕೆಳಕಂಡ ದಾಖಲೆಗಳನ್ನು ಒದಗಿಸಲು ಸಂತೋಷವುಳ್ಳವರಾಗಿದ್ದೇವೆ.

ಸಭಾ ಸಿಬ್ಬಂದಿ ಮಾರ್ಗದರ್ಶಿ

ಸಭಾ ಸಿಬ್ಬಂದಿ ಕಾರ್ಯ ನಿರ್ವಹಣೆ ವಿಮರ್ಶೆ ದಾಖಲೆ

ಸಭಾ ಸ್ವಯಂ ಸೇವಕ ಮಾರ್ಗದರ್ಶಿ

ಲೈಫ್‌ಗ್ರೂಪ್ ನಾಯಕರುಗಳು ತರಬೇತಿ ಕೈಪಿಡಿ

ಸಭಾ ಸದಸತ್ವ ಕಿರುಪುಸ್ತಕ

ಮಾರ್ಗದರ್ಶನದ ಮಾರ್ಗದರ್ಶಿ

ಪಾತ್ರ ವಿವರಣೆಯ ಮಾದರಿ

contact@apcwo.orgಗೆ ನೀವು ಇ-ಮೇಲ್ ಕಳುಹಿಸುವ ಮೂಲಕವಾಗಿ ವಿನಂತಿಸಿ-ಕೊಳ್ಳಬಹುದಾಗಿದೆ.

ನಿಮ್ಮ ಸೇವೆಗೆ ಮತ್ತು ಸಭೆಗೆ ಸರಿ ಹೊಂದುತ್ತಿರುವಂತೆ ಉಪಯೋಗಿಸಿ ಮತ್ತು ಮಾರ್ಪಡಿಸಿಕೊಳ್ಳಲು ನೀವು ಸ್ವತಂತ್ರವಾಗಿ ಮಾಡಿರಿ ಉಪಯೋಗಿಸಿರಿ.

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಭೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ಧೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚುಟಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು'' ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಪಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಉಚಿತ ಪ್ರಕಾಶನಗಳು ಮತ್ತು ಸಂಗ್ರಹಗಳು

ಕೆಲಸದ ಕಡೆಗೆ ಸತ್ಯವೇದದ ನೋಟ

ನಿನ್ನ ಕರೆಯನ್ನು ಕಡೆಗಣಿಸದಿರು

ನಿರೀಕ್ಷೆಯನ್ನು ಕಳೆದುಕೊಳ್ಳಬೇಡ

ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು

ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು

ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು

ದೇವರ ರಾಜ್ಯ ಕಟ್ಟುವವರು

ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ

ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು

ಬೇರುಗಳಿಗೆ ಕೊಡಲಿ ಹಾಕುವುದು

ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು

ಉಜ್ಜೀವನದಲ್ಲಿ ಒಂದು ಸಭೆ

ದೇವರ ಪ್ರಸನ್ನತೆ

ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು

ದೇವರು ಒಳ್ಳೆಯ ದೇವರಾಗಿದ್ದಾನೆ

ಅಸ್ತಿವಾರಗಳು ಭಾಗ – 1

ತೆರೆದ ಪರಲೋಕಗಳು

ಜೀವನದ ರಾತ್ರಿಯ ಸಮಯಗಳು

ಪ್ರಾಮಾಣಿಕತೆ

ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ

ಪರಿವರ್ತನೆ

ಗೌರವದ ಸಂಕೇತ

ದೇವರ ಮನೆ

ಮದುವೆ ಮತ್ತು ಕುಟುಂಬ

ದೈವಿಕ ದಯೆ

ದೈವಿಕ ಕ್ರಮ – ನಗರ ವ್ಯಾಪ್ತಿ ಸಭೆಗಳಲ್ಲಿ

ಶುದ್ಧೀಕರಿಸುವ ಬೆಂಕಿ

ಬದ್ಧತೆಯ ಬಲ

ಜಗಳರಹಿತವಾದ ಜೀವಿತ ಜೀವಿಸುವುದು

ಕೆಲಸ ಮತ್ತು ಅದರ ಮೂಲ ವಿನ್ಯಾಸ

ನಾವು ವಿಭಿನ್ನರು

ತಂದೆಯ ಪ್ರೀತಿ

ನಮ್ಮ ವಿಮೋಚನೆ

ಆತ್ಮಿಕವಾಗಿ ಮನಸುಳ್ಳವರಾಗಿರುವುದು ಲೌಕಿಕ ಜ್ಞಾನವಂತರಾಗಿರುವುದು

ದೇವರ ಮಾರ್ಗದರ್ಶನ ಪಡೆದುಕೊಳ್ಳುವುದು

ಪವಿತ್ರಾತ್ಮದಲ್ಲಿ ದೀಕ್ಷಾಸ್ನಾನ

ಪ್ರತಿ ಉದ್ದೇಶಕ್ಕೂ ಒಂದು ಸಮಯವಿದೆ

ಶ್! ಹರಟೆ ಬೇಡ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

ಉಚಿತ ಆಡಿಯೋ, ವೀಡಿಯೋ ಸಂದೇಶಗಳು, ಪ್ರಸಂಗದ ಟಿಪ್ಪಣಿಗಳಿಗಾಗಿ ನಮ್ಮ ವೆಬ್‌ಸೈಟನ್ನು ಸಂಪರ್ಕಿಸಿ (apcwo.org/sermons) ಮತ್ತು ಇತರೆ ಅನೇಕ ಅಧ್ಯಯನ ಸಂಗ್ರಹ ಬಳಸಹುದು.

# ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅದ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ಧೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಆಲ್‌ಪೀಪಲ್ಸ್ ಸಭೆಯು ಭಾರತದಲ್ಲಿ ಅನೇಕ ಸಭೆಗಳನ್ನು ಹೊಂದಿದೆ ಮತ್ತು ಹೊಸ ಸಭೆಗಳು ನಿಯತಕಾಲಿಕವಾಗಿ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್‌ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೆನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

"**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು**" (ಅಪೊಸ್ತಲರ ಕೃತ್ಯ 10:43)

"**ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ**" (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್ಯಾರು ಆತನ ಮೇಲೆ ನಂಬಿಕೆಯಿಟ್ಟರೊ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, "ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ" ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಟಿಪ್ಪಣಿಗಳು

## DOWNLOAD THE FREE APP!

*Search for*

"All Peoples Church Bangalore"
in the App or Google play stores.

Available on the App Store

ANDROID APP ON Google play







*A daily 5-minute video devotional.*
*A daily Bible reading and prayer guide.*
*5-minute Sermon summary.*
*Toolkit with Scriptures on various topics to build faith and information to share the Gospel.*
*Resources with sermons, sermon notes, TV programs, books, music and more.*

*IF YOU LOVE IT, TELL OTHERS ABOUT IT!*

ಸತ್ಯವೇದ ಶಾಲೆ
ಮತ್ತು ಸೇವಾ ತರಬೇತಿ ಕೇಂದ್ರ

# ಆಲ್ ಪೀಪಲ್ಸ್ ಚರ್ಚ್
# ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರ

ಆಲ್ ಪೀಪಲ್ಸ್ ಸಭೆಯ ಸತ್ಯವೇದ ಶಾಲೆ ಮತ್ತು ಸೇವಾ ತರಬೇತಿ ಕೇಂದ್ರವು (APC-BC) ಭಾರತದ ಬೆಂಗಳೂರಿನಲ್ಲಿದೆ. ದೇವರ ವಾಕ್ಯದ ಬೌದ್ಧಿಕವಾದ ಉತ್ಕೃಷ್ಟತೆಯ ಅಧ್ಯಯನ ಮತ್ತು ಸಿದ್ಧಾಂತಗಳ ಉತ್ತಮವಾದ ದೃಢ ಸಿದ್ಧಾಂತಗಳೊಡನೆ ಪವಿತ್ರಾತ್ಮನ ಅತ್ಯದ್ಭುತವಾದ ಬಲದಲ್ಲಿ ಸೇವೆ ಮಾಡಲೂ ಸಜ್ಜುಗೊಳಿಸುವುದು ಮತ್ತು ಆತ್ಮನಿಂದ ತುಂಬಿದ ಅಭಿಷೇಕ ಹೊಂದಿದ್ದು - ತರಬೇತಿಯನ್ನು ಪಡೆದುಕೊಳ್ಳುವುದನ್ನು ಒದಗಿಸುತ್ತೇವೆ. ಒಬ್ಬ ವ್ಯಕ್ತಿಯನ್ನು ದೃಢ ಗುಣವುಳ್ಳವರಾಗಿ ಒಬ್ಬ ನಿಜವಾದಂತಹ ಸೇವಕರಾಗಿ, ದೇವರ ವಾಕ್ಯದಲ್ಲಿ ಆಳವಾಗಿ ಬೇರೂರಿರುವುದಕ್ಕಾಗಿ, ಮತ್ತು ಕರ್ತನೊಂದಿಗಿನ ನಿಕಟವಾದ ಸಂಬಂಧದಲ್ಲಿ ಹೊರ ಹರಿಯುವಂತಹ ಅದ್ಭುತಗಳು, ಸೂಚಕ ಕಾರ್ಯಗಳು ಮತ್ತು ಮಹತ್ಕಾರ್ಯಗಳನ್ನು ಬಲಯುತವಾಗಿ ಪ್ರದರ್ಶಿಸಲು ಅವರನ್ನು ಅಭಿವೃದ್ಧಿಪಡಿಸುವುದನ್ನು ನಾವು ನಂಬುತ್ತೇವೆ.

ಎ.ಪಿ.ಸಿ-ಬಿ.ಸಿ.ಯಲ್ಲಿ ಉತ್ತಮವಾದ ಬೋಧಕರುಗಳ ಜೊತೆಗೆ ದೇವರ ಪ್ರೀತಿಯನ್ನು ಪ್ರದರ್ಶಿಸುವುದು, ಅಭಿಷೇಕ ಮತ್ತು ಪವಿತ್ರಾತ್ಮನ ಪ್ರಸನ್ನತೆ ಮತ್ತು ದೇವರ ವಾಕ್ಯದ ಅತ್ಯದ್ಭುತಕರ ಕಾರ್ಯಗಳಿಗೆ ನಾವು ಒತ್ತು ಕೊಡುತ್ತೇವೆ. ಅನೇಕ ಯುವ ಪುರುಷ ಮತ್ತು ಸ್ತ್ರೀಯರು ತರಬೇತಿ ಹೊಂದಿದ್ದಾರೆ ಮತ್ತು ಅವರ ಜೀವಿತಗಳ ಮೇಲೆ ದೇವರ ಕರೆಯನ್ನು ನೆರವೇರಿಸಲು ಕಳುಹಿಸಲ್ಪಟ್ಟಿದ್ದಾರೆ.

ನಾವು ಮೂರು ಕಾರ್ಯಕ್ರಮಗಳನ್ನು ನೀಡುತ್ತೇವೆ:

ಒಂದು ವರ್ಷದ ಸರ್ಟಿಫಿಕೇಟ್ ಆಫ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (C.Th.)
ಎರಡು ವರ್ಷದ ಡಿಪ್ಲೊಮ ಆಫ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (D.Th.)
ಮೂರು ವರ್ಷದ ಬ್ಯಾಚುಲರ್ ಆಫ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ (B.Th.)

ತರಗತಿಗಳು ವಾರದ ಪ್ರತಿದಿನ ಸೋಮವಾರದಿಂದ ಶುಕ್ರವಾರ ಬೆಳಿಗ್ಗೆ 8 ರಿಂದ ಮಧ್ಯಾಹ್ನ 1ರವರೆಗೆ ನಡೆಯುತ್ತವೆ. ದಿನದ ವಿದ್ಯಾರ್ಥಿಗಳು, ಕೆಲಸ ಮಾಡುವ ವೃತ್ತಿಪರರು ಮತ್ತು ಮನೆಯಲ್ಲಿ ಇರುವವರು ಇಂತಹ ತರಗತಿಗಳಿಗೆ ಹಾಜರಾಗಬಹುದು ಮತ್ತು ಮಧ್ಯಾಹ್ನ 1 ರ ನಂತರ ಅವರ ಕೆಲಸಗಳನ್ನು ಮುಂದುವರಿಸಬಹುದು.

ವಸತಿನಿಲಯ ಇಚ್ಛಿಸುವಂತಹ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ಪ್ರತ್ಯೇಕ ವಸತಿ ವ್ಯವಸ್ಥೆ ದೊರೆಯುತ್ತದೆ. ವಿದ್ಯಾರ್ಥಿಗಳು ಸೇವಾಕಾರ್ಯಗಳು ವಿಶೇಷ ಸಮಾವೇಶಗಳು ಮಧ್ಯಾಹ್ನದ ಅವಧಿಗಳಲ್ಲಿ, ಪ್ರಾರ್ಥನೆ ಮತ್ತು ಆರಾಧನೆ ಸಮಯದಲ್ಲಿ, ಪ್ರತಿವಾರದ ದಿನ ಮಧ್ಯಾಹ್ನ 2 ರಿಂದ 5ರವರೆಗೆ ಭಾಗವಹಿಸಬೇಕು. ಮಧ್ಯಾಹ್ನದ ತರಗತಿಗಳು ದಿನದ ವಿದ್ಯಾರ್ಥಿಗಳಿಗೆ (ವಸತಿ ಬಯಸದ) ಐಚ್ಛಿಕ ವಿಷಯವಾಗಿದೆ. ಎಲ್ಲಾ ವಿದ್ಯಾರ್ಥಿಗಳು ವಾರಾಂತ್ಯದ ದಿನದಲ್ಲಿ ಒಂದು ಅಥವಾ ಅನೇಕ ಸ್ಥಳೀಯ ಸಭೆಗಳಲ್ಲಿ ಸೇವೆ ಮಾಡಲು ಪ್ರೋತ್ಸಾಹಿಸಲಾಗುತ್ತದೆ.

ಸತ್ಯವೇದ ಶಾಲೆ, ಕೊಡಲ್ಪಟ್ಟಂತಹ ವಿವಿಧ ಕಾರ್ಯಕ್ರಮಗಳು, ಕಲಿಕಾ ವಿಷಯಾಂಶಗಳು ಮತ್ತು ಅರ್ಜಿಯನ್ನು ಡೌನ್‌ಲೋಡ್ ಮಾಡಲು apcwo.org/biblecollege ಅನ್ನು ಸಂದರ್ಶಿಸಿರಿ.

APC-BC is accredited by the
Nations Association for Theological
Accreditation (NATA).

ಎಲ್ಲೆಡೆ ಜಗಳಗಳಿವೆ – ಕುಟುಂಬದಲ್ಲಿ, ಕೆಲಸದ ಸ್ಥಳದಲ್ಲಿ, ಸೇವೆಯಲ್ಲಿ, ಸಭೆಯಲ್ಲಿ ಮತ್ತು ಇದು ಮಾನವನ ಸಂಬಂಧಗಳನ್ನು ತಿಂದು ಹಾಕುತ್ತದೆ. ಜಗಳ ಎಂಬ ಈ ಕ್ಯಾನ್ಸರ್‌ನ ವಿಷಯದಿಂದ ಸ್ಪರ್ಶಿಸಲ್ಪಟ್ಟಿರುವಂತಹ ಜೀವನದ ಯಾವುದೇ ಅಂಶಗಳು ಉಳಿದಿಲ್ಲ.

ಜಗಳ ಅಂದರೇನು? ಅದು ವಿಭಜನೆ, ಕಲಹ, ದ್ವೇಷ, ಕೆಟ್ಟಭಾವನೆ, ವಿವಾದ, ದ್ವೇಷ ಅಥವಾ ಜನರ ನಡುವಣ ವೈಷಮ್ಯವಾಗಿದೆ.

ನಮ್ಮ ಜೀವಿತಗಳಲ್ಲಿ ಜಗಳದ ನಕಾರಾತ್ಮಕ ಪರಿಣಾಮಗಳು, ಜಗಳಕ್ಕೆ ಕಾರಣಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಈ ಪುಸ್ತಕದ ಉದ್ದೇಶವಾಗಿದೆ ಮತ್ತು ನಮ್ಮ ಜೀವಿತದಿಂದ ಜಗಳಗಳನ್ನು ದೂರವಿರಿಸುವುದು ಹೇಗೆ ಎಂಬುದನ್ನು ಕಲಿಯುವುದಾಗಿದೆ.

ವ್ಯಕ್ತಿಗಳಾಗಿ, ನಾವು ಜಗಳವನ್ನು ದೂರವಿರಿಸಲು ಕರೆಯಲ್ಪಟ್ಟಿದ್ದೇವೆ. ದಿನವು ಹತ್ತಿರದಲ್ಲಿದೆ! ಆದುದರಿಂದ ಕತ್ತಲೆಯ ಕಾರ್ಯಗಳನ್ನು ತೊರೆದು ಹಾಕಬೇಕು ಮತ್ತು ಬೆಳಕಿನ ರಕ್ಷಾಕವಚ ಹಾಕಿಕೊಳ್ಳಬೇಕು ಇದು ನಮ್ಮೆಲ್ಲರಿಗೂ ಸವಾಲು ಆಗಿದೆ!

''ಏನಾಗುತ್ತದೆ ಎಂಬುದರ ಮಹತ್ವವಿಲ್ಲದೇ, ಇತರೆ ಜನರು ಏನು ಹೇಳುತ್ತಾರೆ ಅಥವಾ ಮಾಡುತ್ತಾರೆ ಎಂಬುದನ್ನು ನೋಡದೇ ಜಗಳಕ್ಕಾಗಿ ಎಷ್ಟೇ ಅವಕಾಶಗಳು ಬಂದರೂ ನಾವು ಜಗಳ-ರಹಿತವಾದ ಜೀವಿತ ಜೀವಿಸುತ್ತೇವೆಂಬುದಾಗಿ ಹೇಳುತ್ತಿರಬೇಕು''!

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617
Email: contact@apcwo.org
Website: apcwo.org